...ತೈಭಾವನೆಯು ಹೊಸಮನುಷ್ಯ



ಶಾಂತನಾಯ್ಕ ಶಿರಗಾನಹಳ್ಳಿ

ಹಳೆ ಭಾವನೆಯ ಹೊಸ ಮನುಷ್ಯ

ಕವನ ಸಂಕಲನ

ಶಾಂತನಾಯ್ಕ ಶಿರಗಾನಹಳ್ಳಿ

ತಾರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
285/F6, 5ನೇ ವೆಸ್ಟ್ ಕ್ರಾಸ್, ಉತ್ತರಾದಿಮಠದ ರಸ್ತೆ,
ಮೈಸೂರು - 570 004.

HALE BHAVANEYA HOSA MANUSHYA
COLLECTION OF POETRY

WRITTEN BY
SHANTHANAIK SHIRAGANAHALLI
LECTURER, MAHARAJA'S COLLEGE, MYSORE-5

PUBLISHED BY : TARA PRINTING & PUBLISHING HOUSE

FIRST EDITION : 2004 PAGES : XII +74 = 86

ಬೆಲೆ : 65-00 ಅರವತ್ತೈದು ರೂಪಾಯಿಗಳು

ಮುಖಪುಟ : ಖಾನ್ ಮತ್ತು ಮೋಹನ್‌ಗೌಡ

ಅಕ್ಷರ ಜೋಡಣೆ ಮತ್ತು ಮುದ್ರಣ :
ತಾರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

ಅರ್ಪಣೆ

ನಮ್ಮನ್ನಗಲಿದ ನಮ್ಮ
ನಡುವಿನ ಸ್ಫೂರ್ತಿ
ಚೇತನಗಳಾಗಿದ್ದ
ಮೋಹನಕುರಡಗಿ ಹಾಗೂ
ಗವಿಸಿದ್ದ ಎನ್.ಬಳ್ಳಾರಿ
ಅವರಿಗೆ.



ನಿಮ್ಮೊಂದಿಗೆ ಎರಡು ಮಾತು

ಎದೆಗೂಡಿನೊಳಗೆ ಮನೆ ಮಾಡಿರುವ ಹತಾಶೆ, ನಿರಾಶೆ, ವಿಸ್ಮಯ ಪುಂಖಾನು ಪುಂಖವಾಗಿ ಹೊರಬಂದು ಪದ್ಯವಾದದ್ದಂತು ನಿಜ. ಎಲ್ಲೋ ಒಂದು ಕಡೆ ಹಳಿ ತಪ್ಪಿರುವ ವ್ಯವಸ್ಥೆಯಲ್ಲಿ ಒಂದಂತರದ ಸಮಾನತೆ ಹುಡುಕ ಹೊರಟ ಮನಸಿಗೆ ನನ್ನ ಜನರ ಬದುಕು ಬವಣೆ, ನೋವು, ಸೇಡು, ಒಪ್ಪಂದ ಹೋರಾಟ ಇವೆಲ್ಲವೂ ನನ್ನ ಕಾಡಿತ್ತು. ಈ ಬಡವರು ಸರಾಯಿಗೆ Compramise ಆಗುತ್ತಾರೆ. ದುಡ್ಡಿನೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾರೆ. ನಮ್ಮೂರ ಪಕ್ಕದ ಫ್ಯಾಕ್ಟರಿಯೊಳಗೆ ದುಡಿಯುವ ಜನರ ಹಾಡು ಪಾಡು ನೋವಿನಿಂದ ಕೂಡಿದೆ ಕಾಫಿ ಸೀಮೆಯೊಳಗೆ ಚಳಿಯಲ್ಲಿ ಮುದುಡಿ ಮಲಗುವಜೀವ ರೈಟರ್, ಮೇಸ್ತ್ರಿ, Feaudal ಮಾಲಿಕ, ಮ್ಯಾನೇಜರ್ ಎಂಬ ಧೂರ್ತರು ಶೋಷಿಸುವ ಪರಿ ಹೀನಾಯವಾದದ್ದು. ಗೋವಾದ ಸಮುದ್ರದಲ್ಲಿ ಕಪ್ಪೆ ಚಿಪ್ಪು ತೆಗೆಯುವವನಾಗಲಿ, ರಸ್ತೆಯಲ್ಲಿ ಡಾಂಬರ ಸುರಿಯುವವ ಬೀದಿ ಬದಿಯ ಖಾಲಿ ಜಾಗವೆ ಸ್ವರ್ಗವೆಂದರಿತ ಬಡಜನರ ನೋವಿನ ಧನಿ ಈ ಪದ್ಯದ ಸಾಲುಗಳು. ಸುಂದರ ಪ್ರಕೃತಿ, ಸಾಗರ, ಸರೋವರ, ಗಿರಿಕಾನನ, ಜಲಪಾತ ಗಳೆಲ್ಲವನ್ನು ದಾಟಿ ತಮ್ಮ ಬದುಕಿನ ಬವಣೆಯನ್ನು ರಿಥಮಿಕ್ ಆಗಿ ಹೊರಸೂಸುವ ನಮ್ಮೂರ ಕೂಲಿಗಳ ಎದೆಯಿಂದ ಒಂದೊಂದೆ ಶಬ್ದವಾಗಿ ಹೊರಬಂದ ಪದಪುಂಜಗಳೆ ಈ ಕವನಗಳು. ಮೊದಲ ಹೆಜ್ಜೆಯ ನಂತರ ಎರಡನೇ ಹೆಜ್ಜೆಯನ್ನು ಕಾವ್ಯದಲ್ಲಿ ಇರಿಸುತ್ತಿದ್ದೇನೆ, ಸಹೃದಯಿಗಳ ಸ್ಪಂದನ ಅವಶ್ಯ, ತಾವುಗಳು ಓದಿ ಅಭಿಪ್ರಾಯ ತಿಳಿಸಿದರೆ ಸಾಕು ಬರೆದದ್ದು ಸಾರ್ಥಕವಾದೀತು. ಕಾವ್ಯದ ಒಳಹರಿವಿನ ಕುರಿತು ಆಲೋಚನೆ ಅವಶ್ಯ, ಅರ್ಥವಾಗದಿರುವುದೇ ಶ್ರೇಷ್ಟ ಕಾವ್ಯವೆಂಬ ವಾದವನ್ನು ಯಾವತ್ತೂ ಒಪ್ಪದೆ ನನ್ನ ಜನರ ಧನಿಯಾಗಬೇಕು ಕಾವ್ಯ ಎಂದು ನಂಬಿದವನು ನಾನು. ಹಾಗಂತ ಶ್ರೇಷ್ಠರನ್ನೆಲ್ಲಾ ದೂಷಿಸುತ್ತಿಲ್ಲಾ, ಕಾವ್ಯ ಜನರ ನುಡಿಗಟ್ಟಾಗ ಬೇಕು ಎಂದು ಪ್ರತಿಪಾದಿಸಿದ ಮಹಾನ್ ಚಿಂತಕರುಗಳ ಪರ ನನ್ನ ವಾದ.

ಈ ನಾಲ್ಕು ನುಡಿಗಳು ಆರಂಭಕ್ಕೆ, ಒಳ್ಳೆಯ ಮನಸ್ಸನ್ನ, ಒಳ್ಳೆಯ ಕಳಕಳಿ ಹೊಂದಿರುವುದರಿಂದಲೇ ಆತ್ಮೀಯ ಮಾತುಗಳನ್ನ ಮುನ್ನುಡಿಯಲ್ಲಿ ಬರೆದ ಹಿರಿಯ ಸಹೋದ್ಯೋಗಿ ಮಿತ್ರರೂ ಈ ನಾಡಿನ ಖ್ಯಾತ ವಿಮರ್ಶಕರಾದ ಪ್ರೊ.ಸಿ.ನಾಗಣ್ಣ ನವರಿಗೆ, ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಲೆ ಬಂದಿರುವ ಪ್ರೊ. ಕಾಳೇಗೌಡ ನಾಗವಾರ ರವರಿಗೆ ಹೃತ್ಪೂರ್ವಕ ವಂದನೆಗಳು. ಬಿಸ್ಲೇಹಳ್ಳಿ ಪ್ರಭು, ನರೇಂದ್ರಕುಮಾರ,

ಅನುಪಮಾ, ಅನಿಕೇತನ, ಅಕಂಪನ್, ಟಾಪ್ಸಿ, ಮಾಸ್ಕೇರಿ ಎಂ.ಕೆ. ನಾಯಕ, ಪ್ರೊ. ಎಂ.ಎಸ್. ಲಮಾಣಿ, ಪ್ರೊ. ಮುರಿಗೆಪ್ಪ, ಡಾ.ವೀಣಾಶಾಂತೇಶ್ವರ, ಮೂಡ್ನಾಕೂಡು ಚಿನ್ನಸ್ವಾಮಿ, ಡಾ.ಕೆ.ಎಸ್.ಭಗವಾನ್, ಪ್ರೊ. ಎಸ್.ಸಿದ್ದರಾಜು, ಡಾ.ಟಿ.ನಾಗೇಶ್ವರ ರಾವ್, ಪ್ರೊ.ಬರಗೂರ ರಾಮಚಂದ್ರಪ್ಪ, ಪ್ರೊ.ಎಚ್.ಆರ್.ಸ್ವಾಮಿ, ಪ್ರೊ.ಮಲ್ಲಿಕಾ ಘಂಟಿ, ಡಾ.ಗುರುದೇವಿ ಹುಲ್ಲೆಪ್ಪನವರ ಮಠ, ಡಾ.ಸಬರದ, ಚಿತ್ರ ಬರೆದ ಖಾನ್ ಮತ್ತು ಮೋಹನಗೌಡ, ಪುಸ್ತಕವನ್ನು ಮುದ್ರಿಸಿ, ತಾರಾ ಪ್ರಕಾಶನದಿಂದ ಹೊರತಂದ ಆತ್ಮೀಯರು ತಾರಾ ಪ್ರಿಂಟರ್ಸ್‌ನ ಮಾಲೀಕರಾದ ಎಂ.ಎನ್.ಶಶಿಕುಮಾರ್, ಸರಜೂಕಾಟ್ಕರ್, ರವಿಕೋಟಾರಗಸ್ತಿ, ದಿಲಾವರ್ ರಾಮದುರ್ಗ, ಶ್ರೀಮತಿ ಮಂಗಳಾ ವೆಂ.ನಾಯಕ, ಗಂಗಾಧರ ಹಿರೇಗುತ್ತಿ, ಡೇವಿಡ್ ಸಿಮಿಯೋನ್, ಡಾ. ಎ.ಮುರಿಗೆಪ್ಪ, ಹಿರಿಯರಾದ ಟಿ.ಎಸ್.ಯರಗಟ್ಟಿ, ಮೆಹಬೂಬಯರಿಸೀಮಿ, ಪ್ರೊ.ಹಿಮ್ಮಡಿ, ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್, ಪ್ರೊ.ಶಾಂತವೀರಯ್ಯ, ಅಪ್ಪಗೆರೆ ಸೋಮಶೇಖರ್, ರವಿಶಂಕರ್, ಶ್ರೀಮತಿ ಸುಮತಿ, ಶ್ರೀಮತಿ ನಿವೇದಿತಾ, ಶ್ರೀಮತಿ ಆಶಾ, ಯುವಕವಿ ವಿರೇಶ್ ಜಿ.ನಾಯ್ಕ, ಗದುಗಿನ ಪ್ರೊ.ಹೀರೇಮಠ್, ಎಲ್ಲಾ ಯಶಸ್ಸುಗಳಲ್ಲಿ ಸಮಪಾಲಾದ ಶ್ರೀಮತಿ ದಾಕ್ಷಾಯಣಿ ಶಾಂತನಾಯ್ಕ ಹಾಗೂ ನನ್ನೆಲ್ಲ ಗೆಳೆಯರಿಗೆ ಹೃತ್ಪೂರ್ವಕ ಧನ್ಯವಾದಗಳು.

ಶಿರಾಗಾನಹಳ್ಳಿ ಶಾಂತನಾಯ್ಕ
ಮೈಸೂರು

'ದೂರಕ್ಕೆ ಅಂಜದ ದಾಪುಗಾಲಿನ ನಡಿಗೆ'

ಕಾದಂಬರಿ, ಪ್ರಬಂಧ ಸಂಕಲನ, ಏಕಾಂಕ ನಾಟಕಗಳು, ಸಣ್ಣ ಕಥೆಗಳ ಸಂಕಲನ -ಹೀಗೆ ಒಟ್ಟೊಟ್ಟಿಗೆ ಸಾಹಿತ್ಯದ ಸಮೃದ್ಧ ಬೆಳೆಯ ಭಾಗವಾಗಿ ಶ್ರೀ ಶಾಂತ ನಾಯಕರ ಕವಿತಾಸಂಕಲನ **'ಹಳೆ ಭಾವನೆಯ ಹೊಸ ಮನುಷ್ಯ'** ಈಗ ಬೆಳಕು ಕಾಣುತ್ತಿದೆ.

ಶಾಂತ ನಾಯಕರು ಸಹೋದ್ಯೋಗಿಯಾಗಿ ನಮ್ಮ ಸನಿಹಕ್ಕೆ ಬಂದದ್ದು ಇತ್ತೀಚೆಗಾದರೂ 'No Strangers among Scholars' ಎನ್ನುವ ಮಾತಿನಂತೆ ಅವರ ಸಾರಸ್ವತ ಪ್ರಪಂಚದ ಕೃಷಿಯಿಂದಾಗಿ ಆ ಮೊದಲೇ ಪರೋಕ್ಷವಾಗಿ ಪರಿಚಯವಾಗಿದ್ದವರು. ಅವರ ಕಾರ್ಯ ಚಟುವಟಿಕೆ, ತೀಕ್ಷ್ಣವಾಗಿ ಹಾಗೂ ಮೌನವಾಗಿ ಅವರು ಕ್ರಿಯಾಶೀಲ ರಾಗಿರುವ ಕ್ರಮ ನನಗೆ ಮೆಚ್ಚುಗೆಯಾಗಿವೆ.

ಬದುಕಿನಲ್ಲಿ ನಿರಾಧಾರವಾಗಿ ಬಂದವರು ಅಸಾಧ್ಯ ಹಸುವಿನಿಂದ ಜ್ಞಾನವನ್ನು ತುಂಬಿಕೊಳ್ಳಬೇಕಾದ ಜರೂರನ್ನು ಅವರ ಕಾರ್ಯತತ್ಪರತೆಯಲ್ಲಿ ನಾನು ಕಂಡಿದ್ದೇನೆ. ಜೀವನ ಚರಿತ್ರಾತ್ಮಕವಾದ ಹಿನ್ನೋಟವನ್ನು ಆಗಾಗ ಮೆಲುಕು ಹಾಕುತ್ತಿರುತ್ತಾರೆ. ಸೃಷ್ಟಿ ವೈಚಿತ್ರ್ಯದಲ್ಲಿ ಕೆಲವರೇಕೆ ಓಟದಲ್ಲಿ ಮುಂದೆ ಹಾಗೂ ಹಲವರೇಕೆ ಓಟದಲ್ಲಿ ಹಿಂದು? ಈ ಹಿಂದು ಮುಂದೆಂಬ ಭಿನ್ನ ಭೇದವನ್ನು ಒಂದೇ ಜೀವಮಾನದವಧಿಯಲ್ಲಿ ತೊರೆಯಲು ಏಕಾಗುವುದಿಲ್ಲ? ಈ ಮುಂತಾದ ಪ್ರಶ್ನೆಗಳು ನಾಯಕರ ಮನಸ್ಸಿನಲ್ಲಿ ಸದಾ ಕುದಿಯುತ್ತಿರುತ್ತವೆ. ಲೋಕದ ನಕ್ಷೆಯಲ್ಲಿ ಕಂಡು ಬರದ ಜನ ಸಮುದಾಯದ ಢಾಳಾದ ಹೆಜ್ಜೆ ಗುರುತುಗಳನ್ನು ಮೂಡಿಸುವ ಉತ್ಕಟ ಸಡಗರದಲ್ಲಿ ಅವರೀಗ ಬರೆಯುತ್ತಿದ್ದಾರೆ. ಸ್ಥಾಪಿತ ಧ್ವನಿಗಳ ಡೌಲಿನಲ್ಲಿ ಕಂಗೆಡಬಾರದೆಂಬ ಸ್ಥೈರ್ಯವನ್ನು ತಾಳಿ ಭರದಿಂದ ಮುನ್ನುಗ್ಗುತ್ತಿದ್ದಾರೆ. ಮುಂದಡಿಯಿಟ್ಟು ಮುನ್ನುಗ್ಗುವ ರಭಸವನ್ನು ನಾನು ಹತ್ತಿರದಿಂದ ಕಾಣುತ್ತಿದ್ದೇನೆ. ಈ ನುಗ್ಗಾಟ ಶುಭ ಸೂಚನೆ. ಅನೇಕರಿಗೆ ಸಾಧ್ಯವಾಗದ ದೊಡ ಹೆಜ್ಜೆ, ದಾಪುಗಾಲು ಶಾಂತನಾಯ್ಕರಿಗೆ ಸಾಧ್ಯವಾಗುತ್ತಿದೆ. ನಿಶ್ಚಿತ ಮನಸ್ಸಿನ ಜಾಗೃತ ಚಿಂತನೆ ಅವರ ನಡಿಗೆಯನ್ನು ಒಂದು ಗೊತ್ತಾದ ಗುರಿಯೆಡೆಗೆ ನಡೆಸುತ್ತಿದೆ. ಎಳೆಯ ಪ್ರಾಯದ ಮಂದಿ ಗುರಿ ಮುಟ್ಟುವ ತವಕದಲ್ಲಿ ಮುಂದುವರಿಯುವ ಸಡಗರ ನನಗೆ ವೈಯಕ್ತಿಕವಾಗಿ ಸಂಭ್ರಮದ ಸಂಗತಿಯೇ ಇದನ್ನು ಬೇಕಾದರೆ 'Vicarious Thrill' ಅಂತ ಕರೆಯಬಹುದು.

೨

ಶಾಂತನಾಯ್ಕರ ಕಾವ್ಯ ಪ್ರವೇಶಕ್ಕೆ ಈ ಪೀಠಿಕೆ ಬೇಕಾಯಿತು. ಏಕೆಂದರೆ ರಭಸವನ್ನು ರಕ್ತಗತ ಮಾಡಿಕೊಂಡಲ್ಲದೆ ಕಾವ್ಯ ರಚನೆ ಕೈಗೂಡದು. ಹಾಗಾದರೂ ಆಯಿತು, ಹೀಗಾದರೂ ಆಯಿತು, ಹೇಗಾದರೂ ಆಯಿತು ಎನ್ನುವ ಆರಾಮಕಾರನ ನುಡಿಗೆ ಮೊನಚೂ ಇರುವುದಿಲ್ಲ, ಕಾವೂ ಇರುವುದಿಲ್ಲ. ಕಾವ್ಯಕ್ಕೆ ಅತ್ಯಗತ್ಯವಾಗಿ

ಬೇಕಾದ ಕಾವು ಮತ್ತು ಮೊನಚನ್ನು ನಾಯಕರು ಪ್ರಾಪ್ತಗೊಳಿಸಿಕೊಳ್ಳುತ್ತಿರುವ ಸ್ಪಷ್ಟ ಚಿನ್ಹೆ ಅವರ ಪ್ರಸ್ತುತ ಸಂಕಲನದಲ್ಲಿದೆ.

'ಹಳೆಯ ಭಾವನೆಯ ಹೊಸ ಮನುಷ್ಯ' ಸಹಜವಾಗಿಯೇ ಅವರ ಕಣ್ಣು ಕ್ಷಿತಿಜಕ್ಕೆ ಒಗ್ಗದವನು, ಏಕೆಂದರೆ ಈತ ಜಾಗತೀಕರಣದಂಥ ಮರಣಾಂತಿಕವಾದ ಹುನ್ನಾರವನ್ನು ಒಪ್ಪಿ ಅದರಂತೆ ನಡೆಯುವವನು. ಇವನ 'ವೇಷ ಹೊಸದು, ಆದರೆ ಮನದ ತುಂಬ ಹಳೆಯ ಕೊಳೆ; ಕೊಳೆತು ನಾರುವ ವರ್ತಮಾನದಲ್ಲಿ ಇಂಥ ಮನುಷ್ಯನಿಂದ ಯಾವ ಮಹತ್ತರವಾದ ಬದಲಾವಣೆಯೂ ಸಾಧ್ಯವಾಗದು. ಆದ್ದರಿಂದಲೇ 'ಗಾಂಧಿ-ಬುದ್ಧ, ಬಸವ'ರು ಬಸವಳಿಯುವವರೇ ಹೊರತು 'ಕೋಮು ದಳ್ಳುರಿಯ ನೀಲಿಜ್ವಾಲೆ' ನಿಲ್ಲುವುದಿಲ್ಲ. (ಗುಜರಾತಿ ಹುಡುಗನ ಕತೆ) ಬಹುತೇಕ ನಿತ್ರಾಣಗೊಳಿಸುವ ಚಿತ್ರಗಳನ್ನು ಮೇಲಿಂದ ಮೇಲೆ ಕಾಣಿಸುವ ನಾಯಕರು ಕಾವ್ಯ ಪ್ರಪಂಚದ ಸಮೃದ್ಧಿಯನ್ನು ರಿಕ್ತತೆಯ ಒಡಲಿಂದಲೇ ಒಡಮೂಡಿಸುತ್ತಾರೆ. 'ಮುಗಿಲ ಮಡಿಲು ತುಂಬಲಿಲ್ಲಾ ಮಳೆ ಮೋಡ ಆಗಲಿಲ್ಲ, ಬಿರಿದ ನೆಲ ಬಾಯಿ ಮುಚ್ಚಲೇ ಇಲ್ಲ, ಸತ್ತ ಹೆಣಗಳೆತ್ತಲಿಲ್ಲಾ, ಸೊನೆ ಮಳೆ ಜಿನುಗಲೇ ಇಲ್ಲ' ('ಡೊಕ್ಕಿಬರ') 'ಇಲ್ಲ' ಎನ್ನುವ ನಕಾರದಲ್ಲಿ ಇರಬೇಕಾದ ವಸ್ತುಸ್ಥಿತಿಯ ಸಮಸ್ತ ನೋಟವಿದೆ.

೩

ವ್ಯಂಗ್ಯ, ವಿಡಂಬನೆ ಶಾಂತನಾಯ್ಕರ ಪ್ರಖರ ಅಸ್ತ್ರಗಳಾಗಿವೆ. ಸುತ್ತಲ ಪ್ರಪಂಚದ ಜನರು ವಿವಿಧ ವೇಷ ತೊಟ್ಟವರಂತೆ, ನಟರಾಗಿ ಅಭಿನಯಿಸುವ ರೀತಿ; ವಿದ್ಯೆ ಆಗರವಾಗಬೇಕಿದ್ದ ಕ್ಯಾಂಪಸ್ಸುಗಳು ರಾಸಲೀಲೆಯ ಕೇಂದ್ರಗಳಾಗುತ್ತಿರುವ ದುರಂತ; ನಿಜವಾಗಿ ಬೆಳಕನ್ನು ಅರಸಬೇಕಾಗಿದ್ದ ಮಂದಿ, ಜನರನ್ನು ಗಾಢಾಂಧಕಾರಕ್ಕೆ ನೂಕುತ್ತಿರುವ ವಿಪರ್ಯಾಸ; ಹುಸಿ ಕ್ರಾಂತಿಯಲ್ಲಿ ತಮ್ಮನ್ನು ತಾವು ಕಳೆದುಕೊಂಡ ಬರಹಗಾರರು, ಇದೆಲ್ಲ ಇರುವ ಮಾದರಿಗಿಂತ ಭಿನ್ನವಾದ ಕ್ರಮದಲ್ಲಿ ಇರಬೇಕಾದ ಜಗತ್ತನ್ನು ಸೂಚಿಸುವುದಕ್ಕೆ ದಾಖಲಾಗಿದೆ.

ಡಾಂಭಿಕತನದ ವಾಸ್ತವದ ಮಧ್ಯೆ ಆದರ್ಶಪ್ರಾಯವಾಗಬಲ್ಲ ವ್ಯಕ್ತಿಗಳನ್ನು ಕವಿ ಸೂಕ್ಷ್ಮವಾಗಿ ಗಮನಿಸಿದ್ದಾರೆ. 'ಮುದುಕನೊಬ್ಬನ ಅಂತರಾಳ' ಎಂಬ ಕವನದಲ್ಲಿ ಅಂಥ ವ್ಯಕ್ತಿಯೊಬ್ಬನ ದರ್ಶನವಾಗುತ್ತದೆ.

ಬರಿದಾದ ಇಳೆ
ಬೋಳು ಬೋಳಾದ ಗಿರಿ ಸಾಲು
ಬತ್ತಿ ಹೋದವೆ ಹಳ್ಳಕೊಳ್ಳ ವರ್ತಿ ಕಾಲುವೆ
ನಿಲ್ಲಿವನೇ ಕಾಲರಾಯ
ಮುದುಕನ ಮಾತಿಗೆ

ಇಂಥ ವೃದ್ಧನ ರಕ್ತ ಸಂಬಂಧಿಗಳಂತೆ ಕಾಣುವ 'ಮಂಡರ ಭೀಮ' ಒಮ್ಮೆ

ಬಿರುಗಾಳಿಯಂತೆ ಬಂದು ತನ್ನ ಲೀಲೆಯನ್ನಾಡಿ ಮುಗಿಸಿ ಮರೆಯಾಗುತ್ತಾನಾದರೂ ಕವಿಯ ಮನೋಭಿತ್ತಿಯಲ್ಲಿ ಶಾಶ್ವತವಾದ ಸ್ಥಾನ ಪಡೆದುಬಿಡುತ್ತಾನೆ. ಇಂಥ ಮುದು ಕರ ವಿಶಿಷ್ಟ ಲೋಕವನ್ನು ಈ ಕವಿ ಬಹಳ ಆಸ್ಥೆಯಿಂದ ಚಿತ್ರಿಸಿದ್ದಾರೆ. ವೃದ್ಧರನ್ನು, ವೃದ್ಧಾಪ್ಯವನ್ನು ಸಾವಕಾಶವಾಗಿ ಗಮನಿಸಿ ದಾಖಲಿಸುವ ತಲ್ಲೀನತೆಯಲ್ಲಿ ಕವಿಯ ಮನಸ್ಸಿನ ದರ್ಶನವಾಗುತ್ತದೆ.

ದುಡಿಯುವ ವರ್ಗದವರ ಬೆವರ ಪಾಡಿನ ಲೆಕ್ಕವಿಟ್ಟವರಾರು, ಕರಕಲು ಮುಸುಡಿಯ ಮಂದಿ ಮಹಲಿನವರ ಅಮಲೆಚ್ಚಿಸಲು ದುಡಿಯಬೇಕಾದ ವಿಚಿತ್ರ ಸನ್ನಿವೇಶದ ಕರಾಳ ಸನ್ನಿವೇಶವನ್ನು ಕುರಿತು ಕವಿ ಮತ್ತೆ ಮತ್ತೆ ಧ್ಯಾನಿಸುತ್ತಾರೆ.

ಗತಕಾಲದ ಬಡತನದ ಬಿಗಿಮುಷ್ಠಿಯನ್ನು ನೆನೆದು ಬೆಚ್ಚುವ ಕವಿಗೆ ವರ್ತಮಾನದ ಸುಭದ್ರನಿವಾಸ ಒಂದು ಬಗೆಯ ಭದ್ರತೆಯನ್ನು ತರುವುದಾದರೂ ಬಡತನದ ಆಪ್ತತೆ ಆಳದಲ್ಲಿ ತಲೆಯೆತ್ತಿದಂತೆ ಈಗದು ಇಲ್ಲವಾದಂತೆ ಭಾಸವಾಗುತ್ತದೆ.

ವರ್ತಮಾನದ ಶಾಂತಿರಹಿತ ಪ್ರಕ್ಷುಬ್ಧತೆ ಹಾಗೂ ಹಿಂಸೆಯನ್ನು ಮೆಟ್ಟುವ ರೀತಿಯಲ್ಲಿ 'ಪಾರಿವಾಳಗಳು ಹಾರಾಡಬೇಕಾಗಿದೆ' 'ಪೈಗಂಬರ್, ಏಸು, ಬುದ್ಧ, ಬಸವ' ಮೊದಲಾದ 'ಪ್ರವಾದಿಗಳ, ಜ್ಞಾನಿಗಳ ಹಾದಿಯಲ್ಲೂ ಜಾಲಿ ಮುಳ್ಳುಗುವ ಜನರ' ಕಂಡು ಕವಿ ಕನಲುವುದು ಸಹಜವೇ ಆಗಿದೆ.

'ಉಡಾ ಮತ್ತು ಅವನು' ಎಂಬ ಪದ್ಯ ಅರ್ನೆಸ್ಟ್ ಹೆಮಿಂಗ್‌ವೇಯ ವೃದ್ಧ ಮತ್ತು ಸಮುದ್ರ ಎಂಬ ನೀಳ್ಗತೆಯ ಛಾಯೆಯನ್ನೊಳಗೊಂಡಿದೆ. ಅಲ್ಲಿ, ಮುದುಕ ಅನಂತ ಸಮುದ್ರದೊಡನೆಯೂ ನಿಸರ್ಗದ ನೆಲೆಯಲ್ಲಿ ಮೂಡಿದ ದೊಡ್ಡ ಮೀನಿನ ಜೊತೆ ಹೋರಾಡಿ ಸೋತು ಶರಣಾಗದೆ ಲೋಕಕ್ಕೆ 'ಮುರಿದೇನು, ಆದರೆ ಬಾಗಲಾರೆ' ಎಂಬ ತತ್ವವನ್ನು ಸಾರುತ್ತಾನೆ. ಇದೇ ಬಗೆಯ ಕೆಚ್ಚು ಈ ಪದ್ಯದ ನಾಯಕನಲ್ಲಿ ಪ್ರದರ್ಶಿತವಾಗುವ ಸೂಚನೆಗಳಿದ್ದು ಉಡದ ಬಲಿಗೆ ದನ ಕಾಯುವ ಹುಡುಗರು ಬಿಕ್ಕಿ ಬಿಕ್ಕಿ ಅತ್ತರು ಎಂದು ಪದ್ಯ ಮುಕ್ತಾಯವಾಗುವುದರಿಂದ ನಮ್ಮ ಗಮನ ಪಲ್ಲಟವಾಗಿ ಉಡದ ಸಾವಿಗೆ ದುಃಖಿಸಲಾಗದ ವಿಚಿತ್ರ ಸನ್ನಿವೇಶದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇವೆ.

ಬಿಟ್ಟು ಬಂದ ಬಾಲ್ಯವಾಗಬಹುದು; ಸಾಕಿ ಸಲುಹಿದ ಅವ್ವನಾಗಬಹುದು; ಸತ್ತ ಅಜ್ಜನಿರಬಹುದು; ಬದುಕು ಕಟ್ಟುವ ಅಪ್ಪ ಹೀಗೆ ರಕ್ತ ಸಂಬಂಧದ ಬಂಧನದ ಹಳಹಳಿಕೆಯನ್ನು ಬಿಟ್ಟುಕೊಡದ ಅನುಭವ ಕಾವ್ಯವಾಗಿ ಇಲ್ಲಿ ಕಾಣಿಸಿಕೊಂಡಿದೆ.

೪

ಕವಿ ಕವನಗಳ ನಡಿಗೆಯನ್ನು ಕೃತಕವಾಗಿ ನಿರ್ದೇಶಿಸದೆ ಅವು ಸ್ವತಂತ್ರವಾಗಿ ಬೆಳೆಯುವುದನ್ನು ನೋಡುತ್ತಾರೆ. ಹಾಗಾಗಿ 'ಮುದುಕನೊಬ್ಬನ ಅಂತರಾಳ' ಎಂಬ ದೀರ್ಘಕವನದಿಂದ ಹಿಡಿದು 'ಭೂತ ಭ್ರೂಣಗಳು' ಎಂಬ ಹ್ರಸ್ವ ಕವನದವರೆಗೂ

ಈ ನಿರ್ಲಿಪ್ತತೆಯನ್ನು ನಾವು ಕಾಣಬಹುದು. ಭಾಷಿಕವಾಗಿ ಕವಿ ಇಲ್ಲಿ ಹೆಚ್ಚು ಪ್ರಯೋಗ ಮಾಡುವ ಒತ್ತಡಕ್ಕೆ ಒಳಗಾಗಿಲ್ಲ. ಕೇವಲ ಒಂದೆರಡು ಕಡೆ ಉತ್ತರ ಕರ್ನಾಟಕದ ನುಡಿಗಟ್ಟುಗಳು ಧ್ವನಿತವಾಗುತ್ತವೆ. ಉಳಿದಂತೆ ಹಳೆಯ ಮೈಸೂರಿನ ಕನ್ನಡವೇ ಬಳಕೆಯಾಗಿದೆ. ಇಂಥದೇ ಭಾಷೆಯಲ್ಲಿ ಇಂಥದೇ ನುಡಿಗಟ್ಟುಗಳನ್ನು ಉಪಯೋಗಿಸಿ ಕಾವ್ಯ ಬರೆಯಬೇಕೆಂದು ನಾವು ಯಾವ ಕವಿಯ ಮೇಲೂ ನಿರ್ಬಂಧ ಹೇರಲಾಗದು. 'ವಸ್ತು' ಮತ್ತು 'ರೀತಿ' ಎರಡೂ ಕವಿಯ ಮನೋಧರ್ಮದ ಮೂಲದಿಂದಲೇ ಉದ್ಭವಿಸುವಂಥವು.

ಪ್ರಸ್ತುತ ಸಂಕಲನದ ಬಹುತೇಕ ಕವನಗಳು ಸಾಮಾಜಿಕವಾದ ಬಹಿರ್ ಬದುಕಿನ ವ್ಯಾಖ್ಯಾನಕ್ಕೆ ಮೀಸಲಾಗಿವೆಯಾದರೂ ವಿಡಂಬನೆಯ ಸೂಕ್ಷ್ಮತೆಗೆ ಕುಂದು ಬಂದಿಲ್ಲ. ಸವಕಲು ನುಡಿಗಟ್ಟುಗಳನ್ನು ಸನಿಹ ಸುಳಿಗೊಡದ ರೀತಿಯಲ್ಲಿ ಬಳಕೆಯಾದ ಮಾತುಗಳಿಗೆ ಹೊಸ ಅರ್ಥವನ್ನು ಹೊಳೆಯಿಸುವ ಜವಾಬ್ದಾರಿಯನ್ನು ಹೊರಿಸುವು ದೊಂದು ಸವಾಲಿನ ಕೆಲಸ. ಈ ಪರೀಕ್ಷೆಯಲ್ಲಿ ಮಾತು ಗೆಲ್ಲುವ ಹಾಗೆ ಶಾಂತ ನಾಯ್ಕರು ನೋಡಿಕೊಂಡಿದ್ದಾರೆ.

ಒಂದೊಂದು ಕಾಲದ ಅವಧಿಯಲ್ಲಿ ಒಂದೊಂದು ಸಾಹಿತ್ಯ ಪ್ರಕಾರ ಪ್ರಕಾಶ ಮಾನವಾಗಿ ಮಿನುಗುತ್ತದೆ. ಹೊಸ ಶತಮಾನದ ಈ ಆದಿಭಾಗ ಕನ್ನಡ ಕಾವ್ಯಲೋಕದ ಉತ್ಕರ್ಷ ಪರ್ವವೆಂದು ತೋರುತ್ತಿಲ್ಲ. ಹಳೆಯ ದನಿಗಳು ಕ್ಷೀಣವಾಗಿ ಹೊಸ ದನಿಗಳು ಉದಯವಾಗಬೇಕಾಗಿರುವ ಈ ಸನ್ನಿವೇಶ ಸಂಕ್ರಮಣ ಕಾಲದಂತೆ ಭಾಸವಾಗುತ್ತಿದೆ. ಈ ಸಂದರ್ಭದಲ್ಲಿ ಯಾವ ಹಿಂಜರಿಕೆಯೂ ಇಲ್ಲದೆ ಹುರುಪಿನಿಂದ ಬರೆಯುತ್ತಿರುವ ಶ್ರೀ ಶಾಂತನಾಯ್ಕರು ಗೆಲ್ಲುವ ಸೂಚನೆಗಳನ್ನು ಇಲ್ಲಿ ಧಾಳಾಗಿ ನೀಡಿದ್ದಾರೆ.

ಕಾವ್ಯ, ಕಾದಂಬರಿ, ವಿಮರ್ಶೆ, ಪ್ರಬಂಧ, ಸಣ್ಣಕಥೆ- ಹೀಗೆ ಎಲ್ಲ ಪ್ರಕಾರಗಳಿಗೂ ಸೇರುವ ಕೃತಿಗಳನ್ನು ಏಕ ಕಾಲದಲ್ಲಿ ನೀಡುತ್ತಿರುವ ಮಿತ್ರರಾದ ಶಾಂತನಾಯಕರು ನಿಸರ್ಗದತ್ತವಾಗಿ ಬಂದಿರುವ ತಮ್ಮ ಬೌದ್ಧಿಕ ಶಕ್ತಿಯನ್ನು ಸಮರ್ಥ ವಾಹಿನಿಯಲ್ಲಿ ಹರಿಯಬಿಟ್ಟು ಪರಿಣಾಮಕಾರಿಯಾದ ಫಲಗಳನ್ನು ಪಡೆಯಲೆಂದು ಹಾರೈಸುತ್ತೇನೆ. ಈ ಸಂಕಲನಕ್ಕೆ ಮುನ್ನುಡಿ ರೂಪದ ಮೂರು ಮೂತುಗಳನ್ನು ಬರೆಯಲು ನನಗೆ ಅವಕಾಶ ನೀಡಿದ್ದಕ್ಕೆ ನಾನು ಅವರಿಗೆ ಅಭಾರಿಯಾಗಿದ್ದೇನೆ.

ಆಗಸ್ಟ್ ೨೦೦೪ **ಪ್ರೊ.ಸಿ.ನಾಗಣ್ಣ**

ಪರಿವಿಡಿ

೧. ಹಳೆಭಾವನೆಯ ಹೊಸ ಮನುಷ್ಯ

ಭೂತಕಾಲದ ನೆನಪ ಹೊತ್ತು
ಭವಿಷ್ಯದೆಡೆಗೆ ದಾಪುಗಾಲ ಹಾಕುತ
ಬುದ್ಧನೆದ್ದು ಬೋಧಿಯನ್ನರಸು ಹೊರಟಂತೆ
ಅನಂತತೆಯತ್ತ ಅವನ ಪಯಣ.

ನೆನ್ನೆಯ ನೆನಪ ಹೆಣಕ್ಕೆ
ಶೃಂಗರಿಸಿ ಹೂತು ಬಿಟ್ಟೆ
ಹೊಸ ಜಗದ ಹೊಸ ಯುಗದ
ಹರಿಕಾರ ಗುರಿಕಾರ.

ನಿದ್ದೆಯಲ್ಲಿ ನಿತ್ಯ ಮರಣ
ಎದ್ದಮೇಲೆ ನವೀನ ಜನನ
ಎಲ್ಲೋ ಓದಿದ ನೆನಪು.
ಜಾತಿ ಬಿಟ್ಟು ಜಾತ್ಯಾತೀತನಾದ
ಬೆಕ್ಕು ದೀಕ್ಷೆ ಪಡೆದಂತೆ...

ಜಾಗತೀಕರಣದ ಜೊತೆಗೆ ಒಪ್ಪಂದ
ಆಗಲಿಬಿಡಿ ಏನಂತೆ?
ಸರಣಿ ಸಾವು ಅನಿವಾರ್ಯ
ಹೊಸ ಬದುಕಿಗೆ ಬಲಿದಾನ ಅವನ ವಾದ

ಹಗಲು ವೇಷದ ಮುಸುಕುಧಾರಿಯಂತೆ
ಹೊಸ ವೇಷ
ಮುಖದಲ್ಲಿ ಹೊಸ ಕಳೆ
ಮನದ ತುಂಬ ಹಳೆಯ ಕೊಳೆ.

ಹೊಸವಾದ - ವಿವಾದದ ದರಕಾರಿಲ್ಲಾ
ಮತ್ತೊಬ್ಬರ ಹೇಳಿಕೆಗೆ ತನ್ನ ಹೆಸರು ಸೇರಿಸಿ
ಹೊಸ ಸೀಸೆಯ ಹಳೆ ಸಾರಾಯಿಯಂತೆ
ಅವಿಷ್ಕಾರಿ ಈತ ಹೊಸ ಉಸಾಬರಿ, ಹಳೆ ಮನುಷ್ಯ.

೨. ಗುಜರಾತಿ ಹುಡುಗನ ಕತೆ

ಮುಖಗಳಿಲ್ಲದ ಮನುಷ್ಯರು ಪಹರೆ ಕಾಯುತ್ತಿದ್ದಾರೆ
ಗುಜರಾತಿನ ಗಲ್ಲಿ ಗಲ್ಲಿಗಳಲ್ಲಿ
ಗರ್ಭಿಣಿಯರ ಗರ್ಭ ಸೀಳಿ ಬೆಳಕ ಕಾಣದ ಪಿಂಡಗಳ
ಕೊಚ್ಚಿ ಬಿಸಾಡಿದಾಗ - ಮಾತನಾಡದ ಮೌನ ಪ್ರೇಕ್ಷಕರು.

ಅಂದೆಂದೊ ಗಾಂಧಿ ಬಿತ್ತಿದ ಶಾಂತಿ ಬೀಜ
ಮೊಳಕೆ ಒಡೆಯಲೇ ಇಲ್ಲ
ನೆಲ ಬಂಜೆಯಾಯಿತೆ ಗುಜರಾತಿನಲ್ಲಿ
ಹೇಳು ಗಾಂಧಿ ಮಹಾತ್ಮ..

ಸಾವಿಗಂಜಿ ಗುಜರಾತ ಬಿಟ್ಟ ಹುಡುಗ
ಗೋವಾದ ಮಾಂಸಾಹಾರಿ ಹೋಟೆಲಿನಲ್ಲಿ ಟೇಬಲ್ ಒರೆಸುತ್ತ
ಹಳ ಹಳಿಸುತ್ತಿದ್ದಾನೆ
ಕನಸು - ಕನವರಿಕೆಯಲ್ಲೂ ತ್ರಿಶೂಲ ತಲ್ವಾರ ಕತ್ತಿಮಚ್ಚುಗಳೆ.

ಪಕಡೊ ಸಾಲಕೊ, ಚೀರ್‌ದೋ ನಿದ್ದೆಯಲ್ಲಿ ನಿಲ್ಲದ ಧ್ವನಿ
ಕೂಗುತ್ತಿದ್ದಾರೆ...
ಕೇಳಲು ಜನರಿಲ್ಲ ತ್ರಿಶೂಲ ತಲ್ವಾರ ಮಚ್ಚು ಬೀಸುತ್ತಿವೆ
ಹೆದರಲು ಭೀತಿ ಇಲ್ಲ

ಏ ಭಗವಾನ್ ಯಾ ಅಲ್ಲಾ..
ಅರ್ಥ ಕಳಕೊಂಡ ಬರಿ ಶಬ್ದಗಳು
ಬಾಯಿಬಿಟ್ಟ ನೆಲದಲ್ಲಿ ನೆಲೆಗಾಗಿ ಶೋಧಿಸುತ್ತಿದ್ದಾನೆ
ಮಚ್ಚು ಹಿಡಿದ ಮಂದಿ ಹುಡುಕುತ್ತಿದ್ದಾರೆ....

ಕಳಿಂಗ ಕಾಡಿತ್ತು ಅಶೋಕ ನನ್ನ ಅಂದು
ಬರಲಿಲ್ಲಾ ಮತ್ತೊಬ್ಬ ಗುಜರಾತನ್ನುಳಿಸಲು..
ಗಾಂಧಿ - ಬುದ್ಧ ಬಸವ.... ಬಸವಳಿದು ಹೋದರೂ
ನಿಲ್ಲಲಿಲ್ಲ ಕೋಮು ದಳ್ಳುರಿಯ ನೀಲಿಜ್ವಾಲೆ.


೩. ಡೊಕ್ಕಿಬರ

ಅಪ್ಪ ಹೇಳುತ್ತಿದ್ದ ನಾ ನೋಡದ ಕತೆಯೊಂದ
ಬರದ ನಾಡಿಗೆ ಮಳೆರಾಯ ಬರಲಿಲ್ಲಾ
ಬರಗದ ಕಾಳು ಬಂಗಾರವಾಗಿತ್ತು
ಬರಗದ ಕಾಳು ಬಂಗಾರಾಗಿ - ಕತ್ತಾಳೆ ಬೇರು ಆಹಾರವಾಗಿತ್ತು
ಕಾರಿ ಹಣ್ಣಿನ ಸೊಪ್ಪ ಸಿಗದಾತು.

ಕತ್ತಾಳೆ ಬೇರು ತಿಂದಾರು ಮಂದಿ
ಕಾರಿ ಹಣ್ಣಿನ ಸೊಪ್ಪ ರುಚಿ ನೋಡ್ಯಾರ
ಕತ್ತಾಳೆ ಕರಳಿರಿದು ಕಾರಿಸೊಪ್ಪು ಉರಿಮಂಡಲಾಗೆ
ಹೊಟ್ಟೆ ಉಬ್ಬಿ ಡೊಕ್ಕಿ ಹರಿದು ಕರಳು ಹೊರಬಂತು

ನಿಂತ ನಿಂತಲ್ಲಿ ಕುಂತ ಕುಂತಲ್ಲಿ ಮಂದಿ ಹೆಣವಾದರೊ
ಮುದುಕರಿಲ್ಲ - ಮೂಲಕುವರಿಲ್ಲ
ಮಕ್ಕಳೆ ಇಲ್ಲದ ಊರಾತು
ನೆರಕೆ ಮನೆಗಳ ತುಂಬ ಹೆಣ ರಾಶಿರಾಶಿ.

ಮುಗಿಲ ಮಡಿಲು ತುಂಬಲಿಲ್ಲಾ ಮಳೆ ಮೋಡ ಆಗಲಿಲ್ಲ
ಬಿರಿದ ನೆಲ ಬಾಯಿ ಮುಚ್ಚುಲೇ ಇಲ್ಲ
ಸತ್ತ ಹೆಣಗಳೆತ್ತಲಿಲ್ಲಾ
ಸೋನೆ ಮಳೆ ಜಿನಗಲೇ ಇಲ್ಲಾ.



* ಡೊಕ್ಕಿ = ಹೊಟ್ಟೆ

ಬರಗ = ಭತ್ತದ ಗದ್ದೆಯಲಿ ಸಿಗುವ ಹುಲ್ಲಿನಂತ ಧಾನ್ಯ

೪. ಅಳಲು

ಹರಿವ ನೀರಿನುದರ ಸೇರಿ
ನೂರು ಗಾವುದ ಹರಿವಾಸೆ
ಹರಿಕರುಣಿಸಿದೀ ಹೆಣ್ ಜನುಮ
ಹಳವಂಡು ಸವಾಲಾಗೆ...

ಬಯಕೆ ಸುತ್ತೆಲ್ಲಾ
ಪಾಪಾಸುಕಳ್ಳಿಯ ಬೇಲಿ
ಅಕ್ಕ ತಂಗಿ ತಾಯಿ ಅಜ್ಜಿ ಮಡದಿ
ಎಷ್ಟೊಂದು ಪಾತ್ರಗಳು ಎಲ್ಲಿಯವರೆಗೆ

ಅಹಲ್ಯೆ ಶಬರಿ ಸ್ವತಂತ್ರ್ಯರಾದಂತೆ
ಬೆಳಕ ಲೋಕದಲ್ಲೂ ಕತ್ತಲುಂಡ ಗಾಂಧಾರಿ
ಗಾವುದ ಗಾವುದ ದಾಟುವಾಲೋಚನೆ
ದಿನ ಸುಟ್ಟು, ಕರಕಲಾಗುತ್ತಿರುವ ಹೆಣ್ಣ ಹೆಣಗಳು, ಕಡಿವಾಣವಾದವು.

ಬದುಕು ಆರಂಭವಾಗುವುದೆ ಸಾವಿನಿಂದ
ಸಾರ್ಥಕ ಬದುಕು - ನಿರರ್ಥಕ ಈ ಸಾವು
ಜೀವದೊಳೊಂದು ಜೀವದಾನ
ಅರ್ಥವಾಗದು ದೇಹಜಿಜ್ಞಾಸುಗಳಿಗೆ

ಸುಟ್ಟಷ್ಟು ಸೃಷ್ಟಿಗೊಳುತ
ತಡೆದಷ್ಟು ತಾಳ್ಮೆ ಪಡೆವ
ಗುಲಾಮಗಿರಿಯಿಂದ ಬಿಡುಗಡೆ ಪಡೆವ
ಬದುಕ ಬಂಡಿಯ ಸಹ ಪಯಣಿಗರು...

೫. ಹೋರಾಟಗಾರರ ಸುತ್ತ

ಅವರು ಸಿದ್ಧಾಂತ - ಮೌಲ್ಯ ಎಂಬ
ಬಣ್ಣದ ಬಿಳಿಯಂಗಿ ತೊಟ್ಟಾಗ
ದೇಶ ವ್ಯವಸ್ಥೆಯ ಅವ್ಯವಸ್ಥೆ ಕುರಿತು
ಜನುಮ ಜಾಲಾಡಿ ಬಿಡುತ್ತಾರೆ...

ಮೈಕುನುಂಗುವ ಜನಕೆ ಮೈಕ್ ಸಿಕ್ಕರೆ ಸಾಕು
ತಮಗೆ ಬೇಡವಾದ ಜನರ ಜೀವನದ ಕುರಿತು
ಸಣ್ಣದೊಂದು ವಿಷಯದ ಸುತ್ತ ರಂಗು ರಂಗಿನ
ರಂಗೋಲಿಯ ಚಿತ್ತಾರವನ್ನೆ ಬಿಡಿಸುತ್ತಾರೆ.

ಅರ್ಥವಿಲ್ಲದ ಪ್ರಲಾಪಕೆ ಮರಳಾದ ಜನ
ಅರ್ಥವಾಗದ ಅನರ್ಥ ಶಬ್ದಗಳಿಗೆ ಚಪ್ಪಾಳೆ ಹೊಡೆದಾಗ
ತಮ್ಮ ಪ್ರಖಾಂಡ ಪಾಂಡಿತ್ಯಕ್ಕೆ
ತಮ್ಮ ಬೆನ್ನ ತಾವೆ ಚಪ್ಪರಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

ಮೌಲ್ಯಗಳೆ ಮುಳುವಾಗಿ ಸಿದ್ಧಾಂತ ಹೊಟ್ಟೆ ತುಂಬಿಸದು
ಸತ್ಯದ ಅರಿವಾದೊಡೆ
ವ್ಯವಸ್ಥೆಯ ವಿದ್ರೋಹ ಅವಸ್ಥೆಗೆ
ಒಪ್ಪಿಕೊಂಡು ರಾಜಿಯಾಗುತ್ತಾರೆ

ಮುಸುಕಿನೊಳಗೆ ಗುದ್ದಾಟ ಎಲ್ಲಿಯವರೆಗೆ ?
ಒಳಗೆ ಹೋಯ್ದಾಟ ಹೊರಗೆ ಬೋಯ್ಯುವಾಟ
ನಿಜ ಬದುಕಿಗಾಗಿ ಹುಡುಕಾಟ ತಡಕಾಟ
ಯಾವುದು ತಮ್ಮ ಬದುಕು .. ಅನುಮಾನ.

ಎಲ್ಲಿಯೂ ಸಲ್ಲದ ಜನರು
ಹೋರಾಟ ಹೆಗಲಿಗೇರಿಸಿ ಒಳಗೊಳಗೆ ನಟರಾಗಿ ಅಭಿನಯಿಸುತ
ವ್ಯವಸ್ಥೆಯೇ ತಮ್ಮದೆಂಬಂತೆ
ಹಗಲು ರಾತ್ರಿ ಕನವರಿಸುತ್ತಾರೆ ಏನೋ ಕಳಕೊಂಡವರಂತೆ..

೬. ಕ್ಯಾಂಪಸ್ಸಿನ ಕೋತಿಗಳು

ಕಾಡು ಹೋಗಿ ನಾಡು ಆದದ್ದೆ
ಕಾಡು ಬಿಟ್ಟ ಕೋತಿಗಳು ಹೋದದ್ದಾರು ಎಲ್ಲಿಗೆ ?
ಹಾಳು ಗುಡಿಪಡಸಾಲೆಗೆ
ಮನುಷ್ಯರೇ ವಾಸಿಸದ ಪುರಾತನ ನಗರಗಳಿಗೆ

ಕಾಡು ಬಿಟ್ಟ ಕೋತಿಗಳು ಕಾಡುತ್ತಿವೆ ಆಹಾರಕ್ಕಾಗಿ
ಕ್ಯಾಂಪಸ್ಸುಗಳ ಕೋತಿಗಳು..
ಜಾತಿ ಬೇಲಿಯ ಹೆಣೆದು ಇವನ್ಯಾರವ.. ಇವನ್ಯಾರವ..
ಧರ್ಮದ ಮಲಿನಲಿ... ಕಡಿಮೆ ಅಂಕ ಕರುಣಿಸುವ

ಯಾವಾಗಲೋ ವಸೂಲಿ ಮೇಲೆ ತಗಲಿಕೊಂಡಿದ್ದೆ
ತನ್ನ ಪಾಂಡಿತ್ಯಕ್ಕೆ ಸ್ವಯಂ ಪ್ರಶಂಸೆ..
ತನಗಾದ್ದು ಬೇರೆಯವರಿಗೆ ಸಾಧ್ಯವೆ. ಗುರುವ ಮೀರುವ ಶಿಷ್ಯನಿಲ್ಲ
ತಲೆ ತಿರುಕ ಪ್ರೊಪೆಸರ್ ಒಬ್ಬನ ಪ್ರಲಾಪ.

ಹೆಣ್ಣು ಗಂಡಿನ ನಡುವೆ ತರತಮ
ಗಂಡಿಗಂಜಿಸುತ ಹೆಣ್ಣಿಗಾಗಿಕಾರ್ಶಿಸುತ
ರಾಸಲೀಲೆಯ ಕೃಷ್ಣ ಕೋತಿಗಳು
ತಗಲಿಕೊಂಡಿವೆ ಡಿಪಾರ್ಟಮೆಂಟುಗಳಿಗೆ...



೭. ಸಂತೆ....

ಮಾರುತ್ತಾರೆ ಇಲ್ಲಿ ಮಂದಿ ತಮ್ಮ ಅಸ್ತಿತ್ವವನ್ನ
ಪೂರ್ವ ದಿಕ್ಕಿಗುದಯಿಸಿದ ಸೂರ್ಯ ಪಶ್ಚಿಮದೆಡೆ ಪಯಣಿಸಿದಾಗ
ಮೈ ಕೈ ಸಡಿಲಿಸಿ, ಧೋತರ ಜಾಡಿಸಿ
ಆಗೋ.. ಕೆದರಿದ ಕೊಳಕು ಕೂದಳೆದು ತುರುಬು ಬಿಗಿದು
ಬೆಳಿಗ್ಗೆಯಿಂದ ಬೆವರು ಬಿಟ್ಟ ಮೈ
ಭಾರವಾದ ಹೆಜ್ಜೆ ಹೊತ್ತು ಖಾಲಿ ಚೀಲ ಬುಟ್ಟಿ ಬ್ಯಾಗು
ಹೆಗಲಿಗೇರಿಸಿ
ಹೊರಟುಬಿಟ್ಟರು.... ಬಂದದಾರಿಗೆ ಸುಂಕವಿಲ್ಲದಂತೆ
ಹೊಟ್ಟೆ ಪಾಡಿಗೆ ಹೊತ್ತು ತಂದಿದ್ದ ಸಗಟು
ಗೆಣಸು, ಗಜ್ಜರಿ, ಬೆಂಡಿ, ಬದನೆ, ಕ್ಯಾಬೀಜು, ಕ್ಯಾರಟು, ಇರುಳ್ಳಿ,
ವಿಳ್ಯದೆಲೆ
ಇತ್ಯಾದಿ... ಕೂಗಿ.... ತೂಗಿ... ಎಂಟಾಣೆ, ರೂಪಾಯಿ
ದನಿಕಳಿಕೊಂಡವರು
ಮಂದಿ ಚೌಕಾಸಿಗೆ ಬೇಸತ್ತು ಬಸವಳಿದು
ಕಬ್ಬು - ಕಿತ್ತಳೆ ಪೈನಾಪಲ್ ಜೊತೆಗೆ ಜೀವರಸ ಮಾರಿ
ಸಂದಿಗೊಂದಿ - ಗಮ್ಮ್ ಎನ್ನುವ ಗಟಾರದ ಪಕ್ಕದಲ್ಲೇ
ಹಸಿದ ಹೊಟ್ಟೆಗೆ ಒಂದಿಷ್ಟು ತುರಕಲು ಹಾಸಿಕೂತವರು
ಸಂಜೆ ಸರಿದಂತೆ ತೀಡಿ ಆಡುವಗಾಳಿಯೊಳು
ಹಾರುತ್ತಿವೆ ಸುಳಿ ಸುಳಿಯಾಗಿ ಧೂಳು... ಈರುಳ್ಳಿ ಮಂಡಕ್ಕಿ
ಮತ್ತ್ಯಾವುದೋ
ಬಿಟ್ಟು ಹೊಂಟರು ಸಿಪ್ಪೆ ಸುಕ್ಕು ಪಲ್ಲೆ ಅಳಿದುಳಿದ ಕೊಳತ ಹಣ್ಣು
ಪಹರೆಕಾಯ್ತಿದ್ದ ಕತ್ತೆ, ಹಂದಿ ಬಿಡಾಡಿದನಗಳ ಪಾಲಿನ ಸ್ವರ್ಗ
ಸಂತೆ... ಈಗ ಯುದ್ದ ಮುಗಿದ ಸದೃಶ್ಯ
ಬಿಟ್ಟಕೊಳೆ ಬಿದ್ದ ಬೆವರು - ಕೆಟ್ಟ ವಾಸನೆ
ಜಗದ ಪಯಣ ಮುಗಿಸುವವರೆಗೆ ನೋಡಬೇಕು ಸಂತೆ
ಸುತ್ತ ಬೆಳಕು ಹೊತ್ತು ಕಂತೆ...
ಬಿಡುಗಡೆಯ ದಿನಕ್ಕಾಗಿ ಕಾದು ಕಾದು.

೮. ಅಂದು ಹೋದವರು...

ಎಲ್ಲಿ ಹೋದರೋ ಅವರು
ನಮ್ಮ ಬದುಕನ್ನ ನಿಮಗೆ ಕೊಡುತ್ತೇವೆ ಎಂದವರು
ಹಗಲಲ್ಲಿ ಬೆಳಕು ಹುಡುಕುತ್ತಿದ್ದ
ಚೋಮ, ಸರ್ಪ, ಡಿಗ್ಗ, ಚುಟ್ಟಾ,ರತ್ನಿ, ರಾಮಿ ಪದ್ದಿಯರಿಗೆ
ಭರವಸೆಯಿತ್ತವರು.

ಅಂದು ಒಡೆಯನ ತೋಟದ ಮನೆಯೊಳಗೆ ಕಳಕೊಂಡ ಹರೆಯ
ಮರಳಿ ಪಡೆಯಲು ಹೆಣಗಾಡುತ್ತಿದ್ದಾಳೆ ಇಲ್ಲೊಬ್ಬಳು
ಅವರ ನೆತ್ತರು ಹರಿದದ್ದು ಯಾರಿಗಾಗಿ...
ಹುಡುಕುತ್ತಿದ್ದಾರೆ ಪಳೆಯುಳಿಕೆಯಾಗಿ ಉಳಿದವರು.

ಶತ ಶತಮಾನಗಳ ದಾಸ್ಯ... ಕಸುವಿಲ್ಲದ ಕನಸು
ಕನಸ ಕಾಣಲು ಕಲಿಸಿದವರು
ಉಳ್ಳವರೆದುರು ನಿಂತು ಹಕ್ಕು ಕೇಳಿದವರು
ಹೋದದ್ದಾದರೂ ಎಲ್ಲಿಗೆ ದಿಕ್ಕುಪಾಲಾಗಿ...
ಕುರ್ಚಿ ಸಿಕ್ಕ ಮೇಲೆ ಮತ್ತೇಕೆ ಹಾಳು ನೆನಪುಗಳು
ಕುರ್ಚಿಗಾಗಿಯೇ ಕಾದವರಂತೆ
ನಮ್ಮದು ಮುಗಿಯಿತು - ಹಕ್ಕು ಬೇಕಾದರೆ ಹೋರಾಡಿರೆಂದವರು
ಆತ್ಮ ಕಳೆದುಕೊಂಡ ಪ್ರೇತಾತ್ಮರಂತೆ ಬದುಕಿದ್ದಾರೆ

ಬದುಕೆ ಹೀಗಿರಬೇಕು... ಅವಕಾಶವಾದಿಗಳು ಅವಕಾಶಹೀನರು
Attempt is better than achievement ಎಂಬ ಹಳೆಯ ಮಾತು
ಅನ್ವಯಿಸದು..
ಕುರ್ಚಿಗಾಗಿ ಕ್ರಾಂತಿಮಾಡಿದ ಬುರುಡೆ ಸಾಹಿತಿಗಳಿಗೆ

ಎಲ್ಲಾ ಹೀಗೆ ಹಾಳು ಬದುಕಲಿ...
ಇರುಳ ಗರ್ಭಸೀಳಿ ಹಗಲು ಬಂದಂತೆ
ಯಾರದೋ ಜಾಗದಲ್ಲಿ ಮತ್ಯಾರೋ
ಕಾಯಬೇಕು.... ಬದುಕ ಹೆಗಲಿಗೇರಿಸಿ ಸಾಗಕಬೇಕು.


೯. ಹಾರುವುದಿಲ್ಲ ಪಾರಿವಾಳಗಳು

ಗೂಡುಬಿಟ್ಟು ಹಾರುವುದಿಲ್ಲ ಪಾರಿವಾಳಗಳು
ದೊಡ್ಡೂರಿನ ಮಂದಿಯ ಬಂದೂಕುಗಳಿಗೆ ಹೆದರಿ
ರೆಕ್ಕೆ ಮುದರಿ ಕೊಕ್ಕ ಕುಟ್ಟುತ ಮರಕೆ
ಮತ್ತೆಂದೆಂದು ಬಾರದ ಆ ದಿನಕ್ಕಾಗಿ ಕಾಯುತ್ತಿವೆ.

ಸರಹದ್ದಿನ ತುಂಬ ರುಂಡ ಚೆಂಡಾಡುತ್ತಿದ್ದಾರೆ
ರಕ್ತ ಬೀಜಾಸುರನ ವಂಶಜರು
ಬದುಕಬೇಕೆಂಬ ಬಯಕೆ ಹೊತ್ತು ಹೇಗೆ ಹಾರಿತು
ಗೊತ್ತಿಲ್ಲದೆ ಗುಂಡು ಯಾವ ಕ್ಷಣದಲ್ಲಿ ಬಡದೀತೆಂಬ ಆತಂಕ

ಅವರು ಸಾಯುವುದಿಲ್ಲ ಇವರು ಬಿಡುವುದೇ ಇಲ್ಲಾ
ಯಾತಕ್ಕಾಗಿ ಈ ಸಂಘರ್ಷ
ಸತ್ತವರ ಸಂತಾಪ ಸಭೆಯೊಳಗೆ ಮೊಸಳೆ ಕಣ್ಣೀರು
ಮಡಿದವರೆ ಅಮರ - ಹುತಾತ್ಮರು ನೀವು ಎಂಬ ಹೆಗ್ಗಳಿಕೆ

ಎಲ್ಲಿಯವರೆಗೆ ಕೊಲ್ಲುವವನ ಸೊಲ್ಲಡಗುವುದಿಲ್ಲವೋ..
ಅಲ್ಲಿಯವರೆಗೆ ಪಾರಿವಾಳಗಳು ಹಾರಾಡುವುದಿಲ್ಲ
ಮಸುಕು ಬೆಳಕಲಿ ಜನರು ಹೌ ಹಾರುವುದು ನಿಲ್ಲುವುದಿಲ್ಲ
ನಗುವೆಂಬ ದಾಗೀನ ಸಿಗುವುದಿಲ್ಲಾ...



೧೦. ಧೃತರಾಷ್ಟ್ರನ ಮಕ್ಕಳು

ಧರ್ಮದ ಹೆಸರಿನಲ್ಲಿ ಧಾಂದಲೆ ಎಬ್ಬಿಸುತ್ತಾ
ಕೋಟ ಕೋಟಿ ಜನರ ಮನಸುಗಳ ಸುತ್ತ ಬೇಲಿ ಕಟ್ಟುತ್ತಾರೆ
ಗೋದ್ರಾದಿಂದಿಡಿದು ಒರಿಸ್ಸಾದವರೆಗೆ
ಐಕ್ಯತೆಯ ಹೆಸರಿನಲ್ಲಿ ಆಕ್ಟೋಪಸ್‌ನಂತೆ ತಗಲಿ ಕೊಳ್ಳುತ್ತಾರೆ.

ಮಾತನಾಡುವವರ ಎಷ್ಟೋ ಮಾತುಗಳು
ಮೊಳಕೆ ಒಡೆಯುವ ಮೊದಲೆ ಕಮರಿಹೋಗುತ್ತಿವೆ
ಕನಸಿನಲ್ಲೂ ಕೊಲ್ಲುವವರ ಕರಿಮುಖಗಳು
ಮನುವೆಂಬ ಮುತ್ಸದ್ದಿಯ ಪಾಪದ ಪಿಂಡಗಳು...

ಸೂತ ಪುತ್ರ ಕರ್ಣಂಗೆ ಅಪ್ಪಿಕೊಂಡದ್ದು ಬರಿತೋರಿಕೆ
ಕಿರೀಟ ಕೊಟ್ಟಂತೆ ನಾಟಕ
ಅವನ ಹೆಗಲ ಮೇಲೆ ಬಿಲ್ಲಿಟ್ಟು ಅವನ ದಾಯಾದಿಗಳ ಮುಗಿಸುವ
ಯೋಜನೆ ತಿಳಿಯದು ಈ ಜನರಿಗೆ

ಎಲ್ಲಿ ನೋಡಿದರು ಶತೃಗಳಿವರಿಗೆ
ಶ್ರೇಷ್ಠ ಸಂತತಿಯ ಪ್ರತಿಪಾದಕರು
ಮೆದುಳಿಂದುದಯಿಸಿದೆಯೆಂಬ ಪುಂಗಿ ಹೊಗಳಿಕೆ
ಅಣು ಬಾಂಬಿನಲ್ಲೂ ಬುದ್ಧನನಗೆ ಹುಡುಕುವಿಕೆ

ಯಾರ ಬೀಜವಿದು ?
ಕಲಿಯುಗಕಂಟಿದ ಶಾಪ...
ಯೋಚಿಸುತ್ತೇನೆ...
ಪೈಗಂಬರ್, ಏಸು, ಬುದ್ಧ, ಬಸವ
ಅವರ ಹಾದಿಯೊಳು ಜಾಲಿ ಮುಳ್ಳಾದ ಪರಿಯಕಂಡು.



೧೧. ಮಳೆಗೊಂದು ಅಪೀಲು

ನಿಲ್ಲಿ ಮೋಡಗಳೆ ನಮ್ಮೂರ ಸರಹದ್ದ ಮೇಲೆ
ಬಾಂಬ ಹಾಕುವ ದುಷ್ಟರಿಲ್ಲಾ
ಅಣುವಿಕಿರಣ ಬಿಡುವ ಯಂತ್ರಗಳಿಲ್ಲಾ
ಸಿದಾಸಾದ ಕಡುಬಡ ಮಂದಿಯದ್ದೆ ಕಾರುಬಾರು

ಚೆಲ್ಲಿ ಮೋಡಗಳೆ ನಾಲ್ಕು ಹನಿ ಮಳೆಯ ನೀರ
ಮೊಗ್ಗು ಬಿರಿಯಲಿ ಅವರೆದೆಯೊಳಗೆ
ಹಬ್ಬವಾಗುವುದಂದು ನಮ್ಮೂರೊಳಗೆ
ಮುಗ್ಧ ಆಲೋಚನೆಗೆ ಮುದ್ದಿನಂತೆ.

ಕೆರೆತುಂಬಿ ಹರಿಯಲಿ ಕೋಡಿ
ಕಳಿಸಲಿ ಸುದ್ದಿ ಹೊಸ ನೀರ ಕೈಯಲಿ
ನದಿಯ ಮೀನು - ಕೊಕ್ಕರೆಗಳಿಗೆ
ಏಡಿಗಳೆದ್ದು ಓಡಾಡಲಿ ದಿಬ್ಬ ದಿಬ್ಬಗಳೊಳಗೆ

ಮರದಲ್ಲಿ ಎಲೆ ಚಿಗುರಿ ಹೀಚಾಗಿ ಕಾಯಾಗಿ ಮಾಗಲಿಮಾವು
ಕೋತಿ ಗಿಳಿಗೊರವಂಕಗಳು ನಲಿದಾಡಲಿ
ಹಚ್ಚ ಹಸಿರು ಕುಪ್ಪಸ ತೊಟ್ಟಂತೆ ಭೂದೇವಿ
ಮತ್ತೆ ಮತ್ತೆ ಬನ್ನಿ ನಮ್ಮೂರಿಗೆ..

ಸುತ್ತ ಬಯಲಲಿ ಬೆಳೆದು ನಿಲ್ಲಲಿ ಕಾಡು
ಎಲ್ಲಿ ಉಳದೀತು ಬರದ ನಾಡು
ಬಾ ಮಳೆ ನಮ್ಮೂರಿಗೊಮ್ಮೆ ಅತಿಥಿಯಾಗಿ
ಆಗೋ ಕಾಯುತಿದೆ ಖಾಲಿಕೆರೆ... ದಶಕಗಳಿಂದ ನಿನ್ನಾಗಮನವನ್ನ



೧೨. ಮುದುಕನೊಬ್ಬನ ಅಂತರಾಳಾ

ಎಲ್ಲಿ ಹೋಯಿತೋ ಕಾಲ
ಊರಮುಂದೆ ಕುಂತ ಮುಪ್ಪಾನ ಮುದುಕ ಕೇಳುತ್ತಾನೆ
ಆತ ಹೇಳಿದ ಕಾಲ ಹೋದದ್ದಾರು ಎಲ್ಲಿ?
ಅದ್ಯಾವುದೋ ಸಬ್ಬನ್‌ಗಾಲ
ಆಣೆ, ಬಿಲ್ಲಿ, ದಮಡಿ ಲೆಕ್ಕ
ಇರಲಿಲ್ಲವಂತೆ ಯಾರ‍್ಯಾರಿಗೂ ದುಃಖ
ಆಣೆಸಂತೆ ಹೊರುವರಿಲಿಲ್ಲಾ
ಹಳಹಳಸುತ್ತಾನೆ ಮುದುಕ.

ಸುತ್ತಕಾಡಿತ್ತು ಕಾಡಿನಲೊಂದು ಹುಲಿಯಿತ್ತು
ಓ ! ಸಿನಿಮಾದ ಕತೆಯಲ್ಲಿ ಕಂಡುಂಡ ಅನುಭವ
ದಾರಿಯೇ ಇಲ್ಲದ ದಾರಿ ಸಾಗಿತ್ತು ಸವಾರಿ
ಗೆಜ್ಜೆ ಕಟ್ಟಿದ ಎತ್ತು ಎಳಿದಿದ್ದವು ಚಕ್ಕಡಿಗಾಡಿ
ಊರ ಹನುಮನ ರಥಕೆ ಪಂಜಿನಾ ಮೆರವಣಿಗೆ
ದೊಡ್ಡ ಜೋಳದ ಹೊಲದಲಿ ಅವಿತ ಕಳ್ಳರ ಗುಂಪು
ಹುಡುಕಾಟ ನಡೆದಿತ್ತು ಕೆಂಪು ಮೂತಿಯ ಪೋಲಿಸರಿಂದ
ಆಗ ನಾನು ಚೆಣ್ಣತೊಡದ ಹುಡುಗ
ಮುದುಕ ಮತ್ತೆ ಮಾತನಾಡಿದ.

ಗುರು-ಹಿರಿಯರ ನಯನವಿನಯದ ಕಾಲ
ಮಾತುತಪ್ಪದ ಮನುಜರಿದ್ದರು ಆಗ
ಸಾಲಕ್ಕಾಗಿ ಆಸ್ತಿ ಒತ್ತೆ ಇಟ್ಟವರುಂಟೆ
ಮೀಸೆ ಕೂದಲು ಕೊಟ್ಟ ಉಳಿಸಿಕೊಂಡಂತೆ
ಕಾಲಕೆ ಮಳೆಬಂದು ಭೂತಾಯಿ ಗರ್ಭ ಧರಿಸಿದಂತೆ
ಸುತ್ತಲು ಕಾಡಿತ್ತು - ನಾಡಿತ್ತು ನೆಮ್ಮದಿಯ ನೆಲೆಯಾಗಿತ್ತು
ಬದುಕಿನೊಳು ಹುಸಿಕನಸುಗಳಿಲ್ಲ
ಹಸನಾದ ನೆಮ್ಮದಿ ಸೂಸಿತ್ತು.
ಕೆಂಪುಮಂದಿ ಕಾರುಬಾರಂತೆ ಹೊರಹಾಕಲು ಅವರ
ಹೋರಾಟ ನಡದಿತಂತೆ.

ಗಾಂಧಿ ಎಂಬಾತ ಅಂಬೇಡ್ಕರ್ ಹೋರಾಟಗಾರ
ಅಂತೆ ಕಂತೆಗಳದ್ದೆ ಕಾರುಬಾರು
ಬೆಳೆದದ್ದು ಬದುಕಿಗೆ ಆಧಾರವಾಗಿತ್ತು
ನದಿ ನೀರು ನಾವು ಸುಖವಾಗೆ ಇದ್ದೆವು
ಮಾರ‍್ಯವ್ವ - ಸಿಡುಬವ್ವ ಊರೂರ ಹೊಕ್ಕವು
ಹೆಣಸುಡಲು ಮಂದಿಲ್ಲ ಪ್ಲೇಗವ್ವನ ಕಣ್ಣು ಕೆಂಪಾಗೆ
ಬಂತು ಇಂಗ್ಲಿಷ್ ಔಷಧ
ಮಂದಿ ಸಾಯೋದು ನಿಂತೆ ಹೋತು
ನೂರಾತು, ಸಾವಿರಾತು ಕೋಟಿ ಮೀರಿದ ಮಂದಿ
ಕುರಿಮಂದಯಂತೆ
ಮನೆಮಠ - ಊರು ಕೇರಿ ಬಸ್ಸುಕಾರು
ಹಿಡಿಸುತ್ತಿಲ್ಲ ಅಡವಿಯಲ್ಲೂ.

ಬರಿದಾದ ಇಳೆ..
ಬೋಳು ಬೋಳಾದ ಗಿರಿಸಾಲು
ಬತ್ತಿ ಹೋದವೆ ಹಳ್ಳ ಕೊಳ್ಳ ವರ್ತಿಕಾಲುವೆ
ನಿಲ್ಲುವೆನೇ ಕಾಲರಾಯ
ಮುದುಕನ ಮಾತಿಗೆ
ಕಾಯುತ್ತಿದ್ದಾರೆ ಜನರಿಲ್ಲಿ ಸತ್ತನೆನ್ನೆಗಳ ನೆನಪಿಗಾಗಿ
ಹಸಿದುಕೊಂಡವರು. ಕಸಿದುಕೊಂಡವರು
ಕಳೆದುಕೊಂಡವರು ಪಡೆದುಕೊಂಡವರು
ಮುದುಕನ ಮಾತಿಗೆ ಧನಿ ಕೂಡಿಸುತ್ತಿದ್ದಾರೆ.

ಇಡೀ ಜಗತ್ತೆ ಒಂದು ಹಳ್ಳಿಯಾತು
ಪೆಪ್ಸಿಕೋಲ ಹಲಿಲ್ಲದ ಬೊಚ್ಚಬಾಯಲಿ ಹೀರುತ ಮುದುಕ
ಜಗತ್ತಿನ ವ್ಯಾಪಾರದಲಿ ರೈತರ ಆತ್ಮಹತ್ಯೆ ಸರದಿ
ನಿಂತುಹೋದವು ಕಾರ್ಖಾನೆ ಬೀದಿಪಾಲಾದ ಕಾರ್ಮಿಕ
ಎಲ್ಲಿಯವರೆಗೆ ಅನಾಹುತ
ಭೂತ - ಭವಿಷ್ಯತ್ತಿನ ಕೊಂಡಿ ಈ ಮುದುಕು
ಮೌನ ಪ್ರೇಕ್ಷಕ

ಬಂಜೆ ಮೋಡಗಳ ನಡುವೆ
ಮಳೆಯ ನೀರಿಗಾಗಿ ಹಂಬಲಿಸುತ್ತಿದ್ದಾರೆ ಅವರು..
ಬಾಯಿ ಬಿಟ್ಟ ನೆಲದ ನಡುವೆ
ತೊಟ್ಟು ನೀರಿಗಾಗಿ ತವಕಿಸುತ್ತಿದ್ದಾರೆ ಮತ್ತೆ ಕೆಲವರು
ಸದ್ದಾಂ, ಲಾಡೆನ್, ವೀರಪ್ಪನ್ ರಂತ ಕಾಲಿಗುಲಾಗಳು
ಕಾಡುತ್ತಿದ್ದಾರೆ ಜನರನು
ಮತ್ತಷ್ಟು ಹಿರೋಶಿಮಾ ನಾಗಸಾಕಿಗಳು...
ಎಲ್ಲಿಯವರೆಗೆ..
ಹೊಸ ಅವಿಷ್ಕಾರಗಳ ನಡುವೆ ಉಗಮ ಹೊಸ ಕಾಯಿಲೆ
ಮನುಷ್ಯ ಪ್ರಕೃತಿಯ ಜಿದ್ದಾಜಿದ್ದಿಯಲ್ಲಿ
ಗೆದ್ದವರ್ಯಾರು...

ಕಂಪಿಸುವ ನೆಲ ನಿಲ್ಲಿಸಲಾಗಲೇ ಇಲ್ಲ
ಉಕ್ಕಿ ಹರಿವ ನದಿಯ ಸೊಕ್ಕು ಅಡಗಿಸಿದಾತ
ಶಾಶ್ವತ ಪ್ರಕೃತಿಯ ನಡುವೆ
ಕೃತಕ ಮಳೆ ಆರ್ಭಟಸಲಿಲ್ಲಾ
ಮುದುಕ ಮಾತನಾಡುವುದನ್ನ ಬಿಟ್ಟಿದ್ದಾನೆ
ಮುಲ್ಕಿ ಕಲಿತವರೆಲ್ಲಾ ಊರ ಸೇರಿದ್ದಾರೆ
ಮಾತು ಕೃತಿ ನಡುವೆ ಮನ್ವಂತರ ನಡೆದಿದೆ

ಸಂಬಂಧಗಳೆಲ್ಲಾ ಹಳಸಿದಂಬಲಿಯಂತೆ ಗಮ್ ಎನುತ್ತಿವೆ
ರುಂಡ ಗಳುರುಳುತಿವೆ ಹಾಡುಹಗಲೆ
ವ್ಯತ್ಯಾಸವಿಲ್ಲದ ಹಳ್ಳಿಗಳು...
ಯಾರ ಮಾತಿಗೆ ಯಾರದ್ದು ದರಕಾರಿಲ್ಲ
ಸಾಗುವ ಕಾಲದ ಗಾಲಿಯ ಹಿಂದೆ
ಎಲ್ಲವೂ ಬದಲಾವಣೆ
ಮುದುಕ ಮಾತ್ರ ಕೊರಿ ಬೀಡಿ ಎಳೆಯುತ್ತ
ಮರೆಯಲಾಗದ ನಿನ್ನೆ ಮೊನ್ನೆಗಳ ನೆನಪಹೊತ್ತು
ಹೆಜ್ಜೆ ಹಾಕುತ್ತಿದ್ದಾನೆ...
ಜಾಗತಿಕರಣದ ಜಾಗಟೆ ಧನಿ ಕೇಳುತ್ತಾ....

೧೩. ಮುಂದೆ.... ?

ಮಾತುಗಳೆ ಇಲ್ಲದ ಮೌನದ ನಡುವೆ
ಭಾವನೆಗಳು ಹಾಡುಕಟ್ಟುತ್ತವೆ
ಬಟಾಬಯಲಾದ ಬೆಟ್ಟದಂತಹ ಬದುಕು
ತೆರೆದುಕೊಳ್ಳುತ್ತವೆ ಹಗಲು ವೇಷದ ಹುರುಪಿನಂದದಿ

ಕೆಂಪು ಹೂವ ಕಂಪ ಅರಿಯಲು ಕರಿಮಂದಿ
ಕಾಯುತಲಿದ್ದಾರೆ ಈ ನಾಡಿನೊಳಗೆ
ಹೆಗಲ ಮೇಲೆ ನೊಗ ಹೊತ್ತ ಎತ್ತಿನಂತೆ
ಹೊರಟಿದ್ದಾರೆ. .. ಹೊರಲಾಗದ ಬದುಕ ಹೆಗಲಿಗೇರಿಸಿ

ಉಳ್ಳವರು ಸಮಾಜದಲಿ ಒಳ್ಳೆಯವರು
ಇಲ್ಲದವರು ದುಷ್ಟ ಜನರು ಎಲ್ಲಿಯವರೆಗೆ ಈ ಹಣಾಹಣಿ
ಹೊಟ್ಟೆಯೊಳಗಿನ ಸಿಟ್ಟು ಬಾಂಬುಗಳಾಗಿ ಸಿಡಿದಾಗ
ಕೆಂಡದುಂಡೆಯಾಗುವ ಸಂಕ್ರಮಣ ಸಮಯ.

ಅಸಮಾನ ಎದೆಗಳು ಸೈತಾನನ ಸಂತತಿಯಂತೆ
ಸೃಷ್ಟಿಸಿದವನ ಮೇಲೆ ಸೇಡಿನ ಸಂಚುಹೂಡಿದಂತೆ
ಹಸುಗೂಸುಗಳೆಲ್ಲಾ ಕಸುಕಿತ್ತು ನಿಂತಂತೆ
ನಿರವತೆಯಲಿ ನೋವು ನೂರ್ಮಡಿಸಿದಂತೆ...



೧೪. ಭೂತ ಭ್ರೂಣಗಳು

ನನ್ನ ನಿನ್ನೆ ಮೊನ್ನೆಗಳನ್ನ ಹರಡಿ
ಕೆದಕಿ ಕೆದಕಿ ತೆಗೆಯಬೇಕು ಎಂದುಕೊಳ್ಳುತ್ತೇನೆ
ಹಳೆ ಮನೆಯ ಗೋಡೆಯ ಕೆಡವಿ ಸೋಸಿದಂತೆ
ಎಲ್ಲಿ ನನ್ನ ನೆನಪ ಚೀಟಿ .... ?
ಮೂಲೆ ಮುರುಕು ಮಂಚದ ಮೇಲೆ ಅವ್ವ ಮುಲುಕಿದ ನೆನಪು.

ನಾನು ದನ ಕಾಯುತ್ತಿದ್ದಾಗ ಸತ್ತ ಅಜ್ಜ
ಬುತ್ತಿ ಉಣಿಸಿದ ಹುಡುಗಿ
ಅಜ್ಜನ ಬೂದಿ ಮುಟ್ಟಿದ್ದು ಅಜ್ಜಿಯನ್ನ ಸುಟ್ಟ
ಮಾಮರದ ಮೇಲೆ ದೆವ್ವದಾಗೆ ಕೂತ ಅಜ್ಜಿ
ರಾತ್ರಿ ದಿಕ್ಕು ದೆಸೆಯಿಲ್ಲದೆ ಓಡಿದ್ದು..

ಹಸಿದು ಬನ್ನಿಕಾಯಿ - ಆಡಿನಂತೆ ತಿಂದದ್ದು
ಎದೆಗೂಡಿನೊಳಗೆ ಅರ್ಥವಾಗದೆ ಕೂತ
ಭೂತ ಭ್ರೂಣಗಳು
ನಿಶ್ಯಬ್ದಗರ್ಭದಲ್ಲಿ ಎದ್ದ ಬಿರುಗಾಳಿ
ಎಷ್ಟೊಂದು ನೆನಪುಗಳು ಯಾವ ಬದಿಗೆ



೧೫. ಹಳೆ ಮುಖಗಳು

ತಗಲಿಕೊಳ್ಳುತ್ತವೆ... ಎಲ್ಲೆಂದರಲ್ಲಿ
ಆಕ್ಟೋಪಸ್ ಬೆನ್ನುಬಿಡದಂತೆ
ಅಕಾಡೆಮಿ ಕಮಿಟಿ ಪ್ರಾಧಿಕಾರದ ಅಧಿಕಾರಗಳಿಗೆ
ಅಂಟಿರುವ ಚಿಕಣಿ ಪಟ್ಟಿಯಂತೆ
ಈಲಿಯಟ್‌ನ ಜೇಮ್ಸ್ ಪ್ರೂಫ್ರಾಕ್‌ನಂತೆ
ಅರವತ್ತರ ಲೀಲೆಯಲ್ಲಿ ತೊಡಗಿಕೊಳ್ಳುತ್ತವೆ.

ಸಭೆಗೆ ಹೋಗುವ ಮುನ್ನ ಕರಿಬಣ್ಣ ಹಚ್ಚಿದ
ಕೂದಲನ್ನ ಪರಪರಾಂತ ಕೆರೆದು
ಮುಗುಳು ನಕ್ಕ ಹದಿಹರೆಯದ ಹುಡುಗಿಯರ ಕಂಡು
ಕಟ್ಟಿಸಿದ ಹಲ್ಲ ಸೆಟ್ಟು ಪ್ರದರ್ಶಿಸುತ್ತ
ಹವಣಿಸುತ್ತವೆ ಹೀರೋನಂತೆ ಪೋಜು ಕೊಡಲೂ

ಹದಿಹರೆಯದ ಹಿಂಡಿನೊಳಗೆ ಗುರುತಿಸಿಕೊಳ್ಳಲು ಹೆಣಗಿ
ಮೇಧಾವಿ ಮುಕುಟ ತೊಟ್ಟು...
ಮೆರೆಯುತ್ತಿವೆ ಮಧ್ಯ ವಯಸ್ಸಿನವರ ನಡುವೆ....
ಅವರುಗಳು ಮಾತನಾಡುತ್ತಾರೆ ಅವನ
ಸಾಧನೆಯ ಸರಮಾಲೆಯ ಕುರಿತು

ಹಳೆ ಮುಖಗಳು ಹೊಸ ಯುಗಕೆ ಹೊಂದಿಕೊಳ್ಳಲು
ಹೊಸಜನಕೆ ಹಳತಕಂಡು ಏನೋ ಗೌರವ
ಹಳೆ ಬೇರು ಹೊಸ ಚಿಗುರು ಬೆರತಿರಲು ಮರಸೊಗಸು
ಇಂದಣ ಅನಂತವನ್ನು ಮುಂದಣ ಅನಂತ ಕ್ಷಣ ಒಳಗೊಂಡಂತೆ
ಹಳೆ ಹೊಸದರ ಹೊಂದಾಣಿಕೆ...

೧೬. ಹಕ್ಕಿಗಳಿಗಿಲ್ಲ ಕನಸು

ಹಕ್ಕಿಗಳೆ ಹೀಗೆ
ಹಗಲಾದೊಡನೆ ಹಾರಿ ಬಿಡುತ್ತವೆ
ಗೂಡಬಿಟ್ಟು, ನಾಡಬಿಟ್ಟು, ಗಡಿಬಿಟ್ಟು
ಮನುಜನೆಂಬುವನ ಮುಲಾಜು ಕಾಯದಂತೆ...

ಹಗಲು ಕನಸೆಂದು ಕಾಣುವುದಿಲ್ಲ
ಕುಂತಲ್ಲೆ ಕನಸಿನ ಸೌಧ ಕಟ್ಟುವುದಿಲ್ಲ
ಸಾಮಾನ್ಯ ಕೂಲಿಯಂತೆ ಸುತ್ತ ಹತ್ತುಹರದಾರಿ ಹಾರುತ್ತಿದೆ
ಆಹಾರಕ್ಕಾಗಿ

ಹಿಟ್ಲರ್ ಬುಷ್ ಸದ್ದಾಂ ಮನು ಗಳಂತೆ
ಮನೋವಿಕಾರಿಗಳಲ್ಲಾ
ಪ್ಯಾಲೆಸ್ತಿನ್‌ನಲ್ಲಿ ನಿತ್ಯ ಹೆಣ ಉರುಳುವುದ ಕಂಡು ಮರಗುವುದಿಲ್ಲ
ಮುರಿದ ಒಪ್ಪಂದಕೆಂದು ಸ್ಪಂಧಿಸುವುದಿಲ್ಲಾ..
ಈ ಹಕ್ಕಿಗಳೆ ಹೀಗೆ
ಮನುಷ್ಯನಂತೆ ಒಡಲೊಳಗೆ
ಅಸಮಾನತೆಯ ಕೆಂಡ ಕಟ್ಟಿಕೊಳ್ಳುವುದಿಲ್ಲಾ
ಸೇಡಿಗಾಗೇ, ಸಡ್ಡುಹೊಡೆದು ನಿಲ್ಲುವುದಿಲ್ಲ
ಗುಜರಾತಿನಗಲ್ಲಿಗಳು ಕೆಂಪಡರುವುದ ಕಂಡು
ಅಚ್ಚರಿ ಪಡುವುದಿಲ್ಲ.

ರೈತನ ಆತ್ಮಹತ್ಯೆ ಕತೆಯಾದದು
ನೀರಿಗಾಗಿ, ನೆಲಕ್ಕಾಗಿ ಹೊಡೆದಾಡುವ ಮಂದಿ
ಭಾವನೆಗಳೆಂದು ಅರ್ಥವಾಗುವುದಿಲ್ಲ
ಹಕ್ಕಿಗಳೆ ಹೀಗೆ
ಸರಹದ್ದು ಬಿಟ್ಟು ಹಾರುತ್ತವೆ....
ಸಿರಿಯಾ ರೋಮಾನಿಯಾದಿಂದ
ರಂಗನತಿಟ್ಟಿನವರೆಗೆ ನೆಲೆಗಾಗಿ ನಾಳಿನ ನೆನಪಿಗಾಗಿ.

೧೭. ಕಾಯುವುದೆಂದರೆ

ಕಾಯುವುದೆಂದರೆ... ಹೀಗೆ
ಕೆಲವರು ಕಾಯುತ್ತಾರೆ ಬಸ್ಸಿಗಾಗಿ
ಇನ್ನು ಕೆಲವರು ಬಸ್ಸಿನಿಂದಿಳಿಯುವವರಿಗಾಗಿ
ಗುಡಿ ಗುಂಡಾರದಲಿ ಪಬ್ಲಿಕ್ ಪಾರ್ಕಿನಲಿ ಎಗ್ಗಿಲ್ಲದೆ
ಅವರು ಇವರಿಗಾಗಿ ಇವರು ಅವರಿಗಾಗಿ
ಶಬರಿ ರಾಮನಿಗೆ
ರಾಧೆ ಕೃಷ್ಣನಿಗೆ....
ಅವರದೇ ಗತ್ತಿನೊಳಗೆ.. ಮತ್ತ್ಯಾರಿಗೋ
ಮುಂಜಾನೆಯಿಂದ ಸಂಜೆಯವರೆಗೆ
ಅಂಗಡಿ ಕದತೆರೆದು ಗಿರಾಕಿಗಾಗಿ ಶೆಟ್ಟಿ
ಲಾಭದಾಸೆಗಿಳಿಯುವಂತೆ
ಟೋಪಿಹಾಕಲು ದಲ್ಲಾಳಿ
ನೌಕರಿ ಆಶಿ ತೋರಿಸುವ ಬ್ರೋಕರ್
ಹೆಣ್ಣು ಹೆತ್ತವರು ದುಡ್ಡು ಹಿಡಿದು ವರದಕ್ಷಿಣೆಗೆ
ಹುಡುಕುವಂತೆ ಹುಡುಗನ
ನೂರು ಭಾವನೆ ಹೊತ್ತು
ನಗುವ ನಾಟಕವಾಡುತ
ಕನಸು ಕಂಡವರಂತೆ ಒಮ್ಮೆಲೆ ಬೆಚ್ಚಿ ಬಿದ್ದು
ಬರದವರ ನೆನಪ ಬೆನ್ನ ಮೇಲೆ ಹೊತ್ತು
ಬರುವವರೆಗೆ ಕಾದು ಬೇಸರಗೊಂಡು
ಬರದಿದ್ದಾಗ ಕಾದ ಹಂಚಿನಂತೆ ಚಡಪಡಿಸುತ್ತ
ಭಾವನೆಗಳ ಜೊತೆಗೆ ಹೊಡೆದಾಡಿ
ಮನೆ ಸೇರುವ ತವಕ
ಬರದ ಬಸ್ಸಿನ ಹಿಂದೆ ನಡೆದು ಸೇರಿದರು ಮನೆ
ಕಾಯುತ್ತಿದ್ದವರು ಕಾಯಿಸುತ್ತಿದ್ದವರು
ಒಂದೇ ಬಸ್ಸಿನ ಪಯಣಿಗರು ಒಮ್ಮೆ...
ಕಾಯುವವರೇ ಇಲ್ಲಾ..
ಯಾರು.. ಯಾರಿಗೂ ಜಗದಲಿ...

೧೮. ಗುಡಿಗಳೇ ಇಲ್ಲದ ದೇವರುಗಳು

ಮಳೆಯಾದ ಮರುದಿನ ಮರದ ಕೆಳಗೊಂದು ಕಲ್ಲದೇವರು
ನೀರು ಹರಿದು ಮಣ್ಣು ಸರಿದು
ಕಂಡ ಗುಂಡುಕಲ್ಲು
ಬೆಳಗಾಗುತ್ತಲೇ ದೇವರಾಗುತ್ತದೆ.

ಬೀಜ ಬಿತ್ತಲು ಹೊರಟವರು
ಕಾರಿ-ಕಂಚು, ಬಾರಿ ಹಣ್ಣು ಹೊತ್ತು ಮಾರಲು ಹೊರಟವರು
ಹರಿಕೆ ಹೊರುತ್ತಾರೆ ನೂರಾರು...
ಗುದ್ದಮ್ಮ, ಮರಿಯಮ್ಮ, ಕೆಂಚಮ್ಮ
ತೂಬಿನ ಚೌಡಿ, ಬಂಡೆ ಚೌಡಿ ಗೌಡರ ಹೊಲದ ಚೌಡಿ

ಒಂದೇ ಎರಡೇ.... ಕೋಟಿ ಕೋಟಿ
ಕಟ್ಟಿಸುವರಾರಯ್ಯ ಗುಡಿ...
ಸ್ಥಾವರಕ್ಕೆ ಅಳಿವುಂಟು ಜಂಗಮಕೆ ಅಳಿವಿಲ್ಲ
ಕರಾರುವಕ್ಕು ಪರಿಪಾಲನೆ.

ಕೋಳಿ, ಕುರಿ ರಕ್ತ ಮಾಂಸಗಳ ಮಜ್ಜನ
ಈ ದೇಶದ ಜನರೆದೆಯಲಿ ಬೇರೂರಿರುವ ಭಯ
ಗಾಳಿದೇವರು ಗಡಿದೇವರುಗಳಿಗಿಲ್ಲ ಗುಡಿಗೋಪುರ
ಜೋಳ ಹಸನುಮಾಡುವ ಮರದಲ್ಲಿ ಎಡೆಮಾಡಿ ಗಡಿಯಾಚೆಯ
ಬೇವಿನ ಮರ ದಾಟಿಸಿದರಾಯಿತು.

ಮಹಂಕಾಳಿ - ಅಜ್ಜಿ, ಪಂಚಪಾಂಡವರು
ಕೋಟಿ ಕೋಟಿ ದೇವರುಗಳಿಗೆ ಕೈಮುಗಿಯುತ್ತಾರೆ ಜನ
ಬಯಲ ದೇವರಿಗೇಕೆ ಪೂಜಾರಿ
ಇಲ್ಲದವರ ಪ್ರತೀಕ
ಕರಿಜನರ ಪ್ರತಿನಿಧಿ.

ಗುಡಿಗಳೇ ಇಲ್ಲದ ದೇವರು
ತುಂಬಿದ್ದಾರೆ ಹಟ್ಟಿಯ ತುಂಬ

ಪೂಜಾರಿಗಳಿಲ್ಲದ ಪೂಜೆ
ನೈವೇದ್ಯಕ್ಕೊಂದಿಷ್ಟು ಸರಾಯಿ.

ಯಾವನೊಬ್ಬ ಭಕ್ತನ ಮೈ ಮೇಲೆ ಧುತ್ ಎಂದು ಬಂದು
ಮಾಮೂಲು ಕೇಳದೆ ನೇರ ಮಾತು ಕತೆ
ಎಲ್ಲಿ ಹೋದರವರು ವರುಷಗಟ್ಟಲೆ ತಪವಗೈದವರು
ಇಷ್ಟೊಂದು ಸುಲಭ ದೇವರಮಾತು.

ಊರ ಸುತ್ತಣ ಐನೂರು ದೇವರು
ಗಿಡಕ್ಕೊಂದು ಹೊಲಕ್ಕೊಂದು ಒಡ್ಡಿಗೊಂದು
ರಾತ್ರಿ ನಿರವತೆಯಲಿ
ಕುರಿಕಾಯುವ ಕುರುಬ ಬೆಳಕ ಒಯ್ಯುತಿರೆ
ಅವ್ವ ಹೇಳಿದ್ದ ಅವಕ್ಕಾಗಿ ಕೇಳಿದ್ದೆ
ಈಚಲ ಚೌಡಿ ತೂಬಿನ ಚೌಡಿಯ ಹತ್ತಿರ ದೀಪ ತರುತಿದ್ದಾಳೆ
ಅಂದು ಕಂಡದ್ದು ಮತ್ತೆ ಕಾಣಲಿಲ್ಲ
ನಾನು.... ಕಾಯುತ್ತಿದ್ದೇನೆ ಅಕ್ಕ ತಂಗಿಯರನೊಮ್ಮೆ
ನೋಡಬೇಕೆಂದು.



೧೯. ಬಯಲ ಬದುಕು

ಮಾತು ಮಾರಿ ದಣಿದವನೀತ ಜಾತ್ರೆಯೊಳಗೆ
ಉಸರಬುಲ್ಡಿ, ಪೀಪಿ, ಪಿನ್ನು ದಾರ, ಸೂಜಿ, ಚೆಂಡು, ಬುಗರಿ
ಹೆಂಗಸರು ಮಕ್ಕಳ ಸಾಮಾನು ಮಾರಲ್ಲಿಳೆಬಿಟ್ಟವನು
ಕಾಸಿಗೊಮ್ಮೆ ಚೌಕಾಸಿ..

ಕೇಳುತ್ತಾರೆ ಕೊಳ್ಳುತ್ತಾರೆ ಇವನು ಹೇಳಿ ದಣಿಯುತ್ತಾನೆ
ಜನಂಜಾತ್ರೆ ಮೂಗಿಗಡರಿಕ್ಕುವ ಬೆವರ ವಾಸನೆ
ಧೂಳಿನ ಕಮ್ಮಟು ಇರುವೆ, ಗೊದ್ದಗಳ ಸಾಲಿನಂತೆ
ಇರಳು ಮತ್ತೆ ಖಾಲಿತನ.

ಮೂರು ಕಲ್ಲಿನ ಮೇಲೆ ತಳಕಟ್ಟಿದ ಪಾತ್ರೆ
ತುಂಡುಕಟ್ಟಿಗೆ ರದ್ದಿ ಪೇಪರ್
ಉರಿ ಬೆಂಕಿಯು ಕೆನ್ನಾಲಿಗೆ ಚಾಚಿ ತಬ್ಬಿಕೊಳ್ಳುತ್ತಿದೆ
ಅದೇ ಬೆಳಕಿನೊಳಗೆ ಹಗಲ ಲಾಭದ ಎಣಿಕೆ

ಬಯಲ ಬದುಕು ಜಾಗಯಾವುದೋ
ಯಾವುದಾದರೇನು ಅದಕ್ಕುಂಟೆ ಬೆಲೆ
ನೆಲೆಯೇ ಇಲ್ಲದೆ ಊರಿಂದೂರಿಗೆ
ಜಾತ್ರೆಯಿಂದ ಜಾತ್ರೆಗೆ ಹೊಸ ಬದುಕು ಹುಡುಕಾಟ

ಜಾತ್ರೆಧೂಳಿನೊಳಗೆ ಪಾಟ್‌ಹಾಸಿ ಸವಿಯುವ ಸುಖನಿದ್ರೆ
ಇಗೋ.... ನಿದ್ದೆಯಿಲ್ಲದೆ ತಳ್ಳಲಾಗದ ಇರುಳ ಚಡಪಡಿಕೆ
ಆರಕ್ಕೇರದ ಮೂರಕ್ಕಿಳಿಯದ ಬದುಕು
ಗಂಟು ತಲೆ ಮೇಲೆ ಭಾರಕ್ಕೆ ಆಲೋಚನೆ, ಕನಸು ಮಾಯ.

ಮುಂದಿನ ಜಾತ್ರೆಯಲಿ ಮತ್ತೆ ಜನರು
ಭಾವನೆಗಳೆ ಇಲ್ಲದ ಬದುಕ ಬದುಕುತ
ಊರಿಂದೂರಿಗೆ ಅಲೆಯುತ
ನಾಳೆಗಾಗಿ ಕಾಯದವರು ಇವರು ಪೆಂಡಂಡ್ಲೇರು..

* ಪೆಂಡಂಡ್ಲೋರು = ಜಾತ್ರೆ ಜಾತ್ರೆ ತಿರುಗಿ ಸಾಮಾನು ಮಾರುವ ಅಲೆಮಾರಿಗಳು

* ಪಾಟ = ರಾಸಾಯನಿಕ ಗೊಬ್ಬರದ ಚೀಲದಿಂದ ಮಾಡಿದ್ದು.

೨೦. ಮೂಡಲ ಸೀಮೆಯ ಮಂಡ

ಕೈಗೊಂದು ಕಡಗ ಮತ್ತೊಂದು ಕೋಲು
ವರುಷಕ್ಕೊಮ್ಮೆ ಭೇಟಿ
ಮಂಡರ ಭೀಮನದ್ದು
ಕುಲವಿಲ್ಲ ನೆಲೆಯಿಲ್ಲ
ಬೊಚ್ಚ ಬಾಯಿ ತಲೆಗೆ ಪಟಗ ಉದ್ದನೆ ಕೋಲು
ಹೆಗಲಿಗೊಂದು ಜೋಳಿಗೆ ಅದ್ಯಾವ ಹಾಡು ಗೊತ್ತಿದ್ದವನೋ
ಆತ
ಅರ್ಥವಾಗದ ವಿಚಿತ್ರ ಮನುಷ್ಯ
ಕಾಳ, ಕೆಂಚ, ಹನುಮ, ರತ್ನಿ, ಸೋಮಿ ಸಾಲು ಸಾಲು
ಮನಿಯಿಂದ ಮನಿಗೆ ಹೊಸದೊಂದು ಹಾಡು
ನಮ್ಮಣ್ಣ ಹೇಳ್ತಿದ್ದ.

ಮಂಡರ ಭೀಮನದ್ದು ಮೂಡಲಸೀಮೆ
ಮಾಟ ಮಂತ್ರಕ್ಕೆ ಹೆಸರುವಾಸಿ
ಐದು ಪೈಸಾ - ಹಿಡಿಗಾಳು ಕೊಡದಿದ್ದರೆ
ಮನೆ ಜಗಲಿ ಮೇಲೆ ತಿಂದದ್ದು ಕಕ್ಕುವನು
ಅದಕ್ಕೂ ಕೇಳದ ಜನರಿಗೆ ಬುದ್ದಿ ಕಲಿಸುವನು
ಒಮ್ಮೆಯಾದರು ಅವನು ಕುಕ್ಕುವ ಪರಿನೋಡಬೇಕಾಗಿದ್ದ,
ಒಡಲೊಳಗಣ ಬಡತನ ಹಾಡಾಗಿ ಕಕ್ಕುತ್ತ
ಹಾದಿಬೀದಿಯ ಸುತ್ತಿದ ಭೀಮ
ಬೇಡಿದ ಕಾಳನ್ನ ಗಂಟು ಕಟ್ಟಿಕೊಂಡು
ಹೊಂಟೋದ ತನ್ನ ಸೀಮೆಗೆ
ಮಳೆಗಾಲ ಕಮ್ಮಿಯಾತು
ಕಣ ಮಾಡೋದು ತಪ್ಪಿಹೋತು
ಭೀಮ... ಮತ್ತೆಂದು ಕಾಣಲಿಲ್ಲಾ
ಹರಕಂಗಿಯ ಮಂಡರ ಭೀಮ
ಕಾಡುತ್ತಿದ್ದಾನೆ ಎಡಬಿಡದೆ..

---

* ಮಂಡ = ಮೊಂಡ, ಹಠಮಾರಿ

೨೧. ಹುತ್ತದ ಹುಳ

ಎಂಥ ಸುಖ ಲೋಲಪ ಬದುಕು ಈ ರಾಣಿಯದ್ದು
ಲಕ್ಷ ಲಕ್ಷ ಗೆದ್ದಲುಗಳು ಹಗಲಿರುಳೆನ್ನದೆ ಮಣ್ಣು ಬಗೆದು
ಮಾಡಿದ್ದವು ಅದ್ಭುತ ಅರಮನೆಯ
ಹೊಲದ ತುಂಬೆಲ್ಲಾ ಹುತ್ತ ಕಟ್ಟಿದ ಕಂಡು ಬೆಪ್ಪಾಗಿದ್ದನಪ್ಪ.

ಮುಂಗಾರ ಮಳೆಗಾಲಕೆ
ಒಡ್ಡು ಕಟ್ಟುತ ಹೊಲದಾಗ ಹುತ್ತವ ಬಗೆವಾಗ
ಬಂಗಾರ ಬಣ್ಣದ ಸುರದ್ರೂಪಿ ಹೆಣ್ಣು ಹುಳು
ಪದರು ಪದರಾದ ನೆಲದೊಳಗೆ ಅಡಗಿತ್ತು.

ಒಳಪದರು ಹೊರಪದರು ಬೆಳಕಿಗೆ ಜಗವಿತ್ತು
ರಾಣಿ ಪುಣ್ಯವಂತೆ ದುಡಿತವಿಲ್ಲದ ಸುಖ
ಬಣ್ಣ ಮಾಸದ ಮೈಮಾಟ
ಯಾರದೊ ಶ್ರಮದ ಫಲ ಬೆಳಕುಕಂಡೊಡನೆ ಪರದಾಟ.

ಈ ದೇಶದಲಿ ಕೆಲವರು ಹೀಗೆ
ಬಡವರ ಬೆವರನ್ನ ದೋಚಿ ಬಾಚಿ ಉಪ್ಪರಿಗೆ ಏರಿದರೆ
ಕರಕಲು ಮುಸುಡಿಯಮಂದಿ ದುಡಿಯುತ್ತಾರೆ
ಸೂರ್ಯನನು ಲೆಕ್ಕಿಸದೆ ಬದುಕಿಗೆ ದುಃಖಿಸದೆ.

ಹುತ್ತ ಬಗಿದ ಮೇಲೆ ಸಾವೆ ಗತಿಯಾತು
ನೊಂದವ ನಿಂತಮೇಲೆ ಬದುಕಿಲ್ಲ ಅವರಿಗೆ
ನಂಜನರಿಯದ ಜನರು
ನಲಗಿ ಹೋಗಿಹರಿಲ್ಲಿ..

---

* ಹುತ್ತದ ಹುಳ = ಗೆದಲುಗಳು ಕಟ್ಟಿದ ಮಣ್ಣು ಒಳಗಿರುವ ರಾಣಿ.

೨೨. ಅಪ್ಪ ಕಟ್ಟಿದ ಬದುಕು

ಮೇರಿ ಮೇಲೆಸಿಕ್ಕ ಅಣಬೆಗಳ ಹೊರೆಹೊತ್ತು
ಆರ್ಯರ ಕೇರಿಯಲಿ ಮಾರಿ
ಹಾಲಕರೆದು ಬೆಣ್ಣೆಮಾರಿ ಬದುಕ ಕಟ್ಟಿದ
ನಮ್ಮಪ್ಪ ನನಗಾಗಿ ನನ್ನ ಮಕ್ಕಳಿಗಾಗಿ
ಹಸಿವಾದರು ಉಣದೆ ಉಪವಾಸ ನಡೆದಾತ
ಉಳಿಸಿದರೆ ಉಳಿದೀತು ವಸುಧೆಯೊಳಗೆ
ಎಂಬುದನ್ನು ನಂಬಿದಾತ
ಉಳಿಸಿ ಗಳಿಸಿ ಬೆಳಸಿದ...

ಬದುಕಭವಣೆಯಲಿ ನುಜ್ಜುಗೊಜ್ಜಾಗಿ
ನೆಲದೊಳಗಿನ ನಿಧಾನ ಗಮನಿಸಿ ಕೊಂಡಾತ
ನೆನಪಿಸಿಕೊಳ್ಳುತ್ತಿದ್ದಾನೆ... ತಾನು ದುಡಿದ ದಿನವ

ಪೋರಿಯತಾರ ಪೂರ್ವಕ್ಕೆ ಬಂದಿದ್ದೆ
ಬಂಡಿಕಟ್ಟಿದ ಹರಪನಳ್ಳಿಗೆ
ಬೀಜ ಹೇರಿದ ಬಾಕಿ ಬಂದದ್ದು ಒಂಬತ್ತಾಣೆ
ಮೂರಾಣೆ ಸಂತಿ ಆರಾಣೆ ಉಳಿಸಿದ.

ದುಡಿದು ದುಡಿದು ಹಣ್ಣಾದ ಮುದುಕ
ಮುಪ್ಪು ಮುಸಿಕಿದೊಡನೆ
ಮೈ ಮೂಳೆ ನೋವಾದಾಗ
ದಟ್ಟನೆನಪುಗಳು ಮುತ್ತಿ ಕಾಡುತ್ತಿವೆ ನಿನ್ನೆ ಮೊನ್ನೆಗಳ...



* ಪೋರಿಯಾತಾರ = ಬೆಳ್ಳಿ ಚುಕ್ಕಿ

೨೫. [illegible] ಮತ್ತು ಅವನು

ಹೊತ್ತಾಗಲೆ ನೆತ್ತಿ ಮೇಲೇರಿತ್ತು
ಅವನು ಮಾತ್ರ ಇನ್ನೂ ಹೆಣಗಾಡುತ್ತಿದ್ದ
[illegible] [illegible]ರಗಳೆದು ಹೆಂಡದೊಡನೆ ನಂಚಿಕೊಳ್ಳುವ ಕರಾಮತಿ
[illegible] [illegible] ಬದಕುವಾಸೆಯ ಹೊತ್ತು ಕೊಸರಾಡುತ್ತಿದೆ.

ತಾಳಿ ಮರದ ಬುಡದಡಿಯ ಬೋನಿನೊಳಗೆ
ಹೊರಟಿತ್ತು ಎಗ್ಗಿಲ್ಲದೆ, ನಾಲಗೆ ಚಪಲದ ಮನುಜ
ಕಂಪದ್ದೆ ಜೊಲ್ಲು ಸುರಿಸುತ
ಬಾಲ ಹಿಡಿದು ಎಳೆಯತೊಡಗಿದ.

ತಳ್ಳಾಟ ನೂಕಾಟ ಸಮಸಮವಾಗಿತ್ತು
[illegible]ತ್ರ ಯಾರಪ್ಪನ ಕಾಯದೆ ಹೊರಟುನಿಂತಿತ್ತು
ಸಂಜೆ ಮಬ್ಬಲಿ ಸೋತನವನು
ಬಿಲಕ್ಕೆ ಕಲ್ಲು ಬಡಿದು ಹೊಂಟ ಮನೆಗೆ...

ರಾತ್ರಿ ಇಡಿ ಬೇಟೆಯದೇ ಕನಸು
ಕೊಂದಂತೆ ಕಡಿದಂತೆ ತಿಂದಂತೆ
ಹೌಹಾರಿ ಎದ್ದಾಗ ಹಗಲಿನಾಗಮನ
ಸಲಕೆ ಹೆಗಲಿಗೇರಿಸಿ ಹೊರಟೆಬಿಟ್ಟ

ಸುತ್ತೆಲ್ಲಾ ಮಣ್ಣು ಅಗೆದು
ಬಾಲಕಂಡೊಡನೆ ಖುಷಿಗೊಂಡಿದ್ದ
ಜಗ್ಗತೊಡಗಿದ ಹೋರಿನಿಂದ ಹೊರಗೆ
[illegible] [illegible] ತುಂಡಾದರು ಹಿಡಿದ ನೆಲ ಬಿಡಲೇ ಇಲ್ಲ.


[illegible]ಲ್ಲ - ಬಿದ್ದರೂ ಮೀಸೆ ಮಣ್ಣಾಗಲಿಲ್ಲ
ಮತ್ತೆ ಅಗೆದ ಹೋರ..
[illegible]ಟಿದ್ದ ಜೋಡಿ ಎತ್ತುಗಳ ಹೂಡಿ ಎಳೆಸಿದ
ಜುಪ್ಪನದಕ್ಕೆ ಜಿಗುಪ್ಸೆಗೊಂಡ.

ಇವನು ಸೋಲನೊಪ್ಪದ ಸರದಾರ
ಪ್ರಾಣದಾಶೆಗೆ ಅದರ ಪರದಾಟ
ಹೊತ್ತು ನೆತ್ತಿಮೇಲೆ ಬಂದಿತು
ಹಸಿವು ನೆತ್ತಿಗೇರಿದ್ದೆ ಬಗೆದ ಮತ್ತೆ ನೆಲ

ಅದರಡಿಯ ನೆಲ ಸಡಿಲಗೊಂಡಿದ್ದೆ
ಆಸರೆ ಕಳ್ಕೊಂಡ ಉಡ ಪ್ರಾಣಭಯದಿಂದ ಬಡದಾಡಿತೊಡಗಿತು
ಭಾವನೆಗಳೆ ಇಲ್ಲದ ಅವನು ಮೇಲಕೆತ್ತಿದ ಸಲಿಕೆಯಿಂದ
ನೆತ್ತಿಸೀಳಿದ.

ವಿಲವಿಲ ಒದ್ದಾಡಿತು ಮರಿಯ ಗೊರಸುಗಳಿಂದ ಎಳೆಯುತ್ತ
ಮತ್ತೆ ಮತ್ತೆ ಹೊಡೆದ ಮರಿಗಳು ಹೆದರಿ ಚೆಲ್ಲಾಪಿಲ್ಲಿಯಾದವು
ಮರುಗಲಿಲ್ಲವೊ ಮನುಜ
ಕರುಣೆಯಿಲ್ಲದ ಕಠೋರ ಹೃದಯದವ

ಎಂಥ ಭಯಾನಕ ಸಾವು
ಹುಡುಕಿ ಬರುವುದು ಇರುವಲ್ಲಿಗೆ
ತುಂಡುಮಾಂಸದ ಚಟಕೆ ಬಲಿಯಾದ ಉಡಕಂಡು
ಅತ್ತಾರೊ ದನಗಾಯಿ ಹೈದರು ಬಿಕ್ಕಿ ಬಿಕ್ಕಿ



*ಸಲಿಕೆ - ಸನಿಕೆ = ಮಣ್ಣು ಎಳೆಯಲು ಬಳಸುವ ಪರಿಕರ

೨೪. ಗುಡಿಸಲು ಮಿಂಚು ಮತ್ತು ಅವ್ವ

ಎರಡೆತ್ತು ಒಂದಾಡು ಕೋಳಿ ಕುರಿ ನಾಯಿ ಬೆಕ್ಕಿನ ನಡುವೆ
ನಮಂಬದುಕು
ಮುಂಗಾರ ಮಳಿಗಾಳಿಗೆ ಹಾರಿಹೋಯಿತು ಗುಡಿಸಲ ಮೇಲಣ ಆಪು
ಸೋರುವ ನೀರು ನಡುಗೆಡ್ಡೆಯಂತ ಒಣನೆಲ
ಕೋಳಿ ರೆಕ್ಕೆಯಡಿಯ ಮರಿಗಳಂತೆ ಒಂಬತ್ತು ಹತ್ತು ಮಂದಿ ನಾವು.

ಚಟ್‌ಚಟಾರ್ ಮುಗಿಲು ಸೀಳಿದ ಮಿಂಚು
ಅರ್ಜುನಾ ಇರ್ಲಿ ಇರ್ಲಿ ಅವ್ವನ ಅಣತಿ
ಪಕ್ಕದ ಬೇವಿನ ಮರಸೀಳಿತ್ತು ಅವ್ವನ ಮಾತಿಗೆ
ಅಂಜಿರಬೇಕು.

ನಿದ್ದೆ ಜೊಂಪು ಛಳಿಯ ತಂಪು
ಅವ್ವನ ತೊಡೆಯ ಮೇಲೆ ತಲೆಗಳು
ನಿದ್ದೆ ತೂಕಡಿಕೆಯಲ್ಲೂ ಹೊಕ್ಕಳ ಬಳ್ಳಿಯಾರೈಕೆ
ಹಗಲಿಗಾಗಿ ಅವ್ವನ ತವಕ
ತೂರಿ ಹೋದ ಆಪಿಗಾಗಿ ಹುಡುಕಾಟ
ತೆಂಗಿನ ಗರಿ ಸಿಕ್ಕಿಸಿ ತೆಪೆ ಮೇಲೆ ತ್ಯಾಪಿ
ಇಡಿ ಮುಂಗಾರ ಕಣ್ಣ ಮುಚ್ಚಾಲೆ
ಗುಡಿಸಲ ತುಂಬೆಲ್ಲಾ

ನಿದ್ದೆ ಕಳೆದುಕೊಂಡ ಆ ದಿನ ನೆನಪಿಸಲಿಗ
ಅವ್ವನಿಲ್ಲ
ಅವಳ ಬಿಸಿ ಅಪ್ಪುಗೆ ನೆನಪಿದೆ
ಪ್ರತಿ ಮುಂಗಾರು ಗುಡುಗಿದಾಗೊಮ್ಮೆ
ಅವ್ವ ನೆನಪಾಗುತ್ತಾಳೆ
ಮಳೆ ತನ್ನ ಪಾಡಿಗೆ ತಾನು ಹೋಯ್ಯುತ್ತದೆ
ನನ್ನ ಬೆಚ್ಚನೆಯ ಕಾಂಕ್ರಿಟ್ ಮನೆಯೊಳಗೆ ನೀರಿನ ಹನಿ
ಹನಿಯಲಾರದು
ಅಂದು ನಿದ್ದೆಗೆಟ್ಟಿದ್ದು ನೆನಪಾಗದಂತೆ
ಗಾಢನಿದ್ದೆಯಲಿ ಮೈ ಮರೆಯುತ್ತೇನೆ.

೨೫. ಅಪ್ರಾಪ್ತ ಪಿಂಡ

ಗುಂಡಿ ಬಾವಿಯೊಳಿದ್ದ ಮಗು ಗಂಡಾಗಿತ್ತು
ಯಾವ ಕುಂತಿಯ ಸಂತಾನವೊ
ಇಡಿ ಊರಿಂದೂರಿಗೆ ಸುದ್ದಿ ಹಬ್ಬಿಗುಲ್ಲೆದ್ದಿತು
ಅಕ್ರಮ ಪಿಂಡ ಸ್ಖಲಿಸಿದವಳು ಮಾತ್ರ ಎಲ್ಲೊ ಅಳುತ್ತಿದ್ದಾಳೆ.

ಮೂಗಿಲ್ಲ ಕಣ್ಣಿಲ್ಲ ಬಾಯಿ ಇಲ್ಲದೆ ತಿಂದಿತ್ತು ಮೀನು
ಅಯ್ಯೊ.... ಶಿವ ಶಿವ... ಸುತ್ತನೆರೆದವರ ಮಾತು
ಇಲ್ಲಸಲ್ಲದವರ ಮೇಲೆ ಆರೋಪ
ಕರ್ಣನ ಕಳಕೊಂಡ ಕುಂತಿ ಮಾತ್ರ ಪಿಂಡ ತುಂಬಿದವನ
ಶಪಿಸುತ್ತಿದ್ದಾಳೆ.

ಬಿಡರೀ ಜನರು ಮತಾಂಧರು
ಜಾತಿ ಜಾತಿಯ ನಡುವೆ ಅಂತರ ಕಾಯ್ಕೊಂಡವರು
ಹುರುಪಿನೊಳಗೆ ತಿಳಿಯಲೇ ಇಲ್ಲ
ಚರ್ಮದ ಮೇಲ್ಪದರು ಸುಲಿದರೂ ಹೋಗದಿಜಾತಿ... ಎಂಬುದು
ಅವರಿಬ್ಬರಿಗನ್ವಯ.

ದೊಡ್ಡ ಜಾತಿಯ ಜನರು ಮಾಡಬಹುದಾದ್ದು
ಸಣ್ಣಜನಕ್ಕೆ ನಿಷೇಧ ಅವರ ಕಾರುಗಳು ದೀಪ ಆರಿದ ಮೇಲೆ
ನಮ್ಮೂರಲ್ಲಿ ದೀಪ ಹತ್ತಿಸಿಕೊಂಡು ಬರುತ್ತವೆ
ಬೇಕು ಎಂದಲ್ಲಿ ನಿಲ್ಲುತ್ತವೆ.

ಎಲ್ಲಿಯವರೆಗೆ ಹೋರಾಟ..
ಅಪ್ರಾಪ್ತ ಪಿಂಡಗಳೆದ್ದು ಕೇಳುತ್ತಿವೆ
ಅಮ್ಮ ಎಲ್ಲಿಯವರೆಗೆ ಕರ್ಣನ ಪಾತ್ರ
ಸಮಾಜಕ್ಕೆ ಹೆದರುವುದಾದರೆ ಕೊಂದುಬಿಡು.

ಗುಂಡಿಬಾವಿಯೊಳಗಿನ ಮಗು ವಿಕಾರವಾಗಿ ಕೂಗುತ್ತದೆ
ದುಷ್ಟಜನರೆ ತೊಲಗಿರಾಚೆ
ನನ್ನಮ್ಮನ ಅಸಹಾಯಕತೆಗೆ ನೀವು ನಿಮ್ಮ ಸಮಾಜವೇ ಕಾರಣ
ತೊಲಗಿ... ತೊಲಗಿ ಒಂದೇ ಸಮನೆ ಚೀರುತ್ತಿವೆ
ಅದರ ಧ್ವನಿ ಮಾತ್ರ ಕೇಳಿಸುತ್ತಿಲ್ಲ.

೨೬. ಸಾಹೇಬರ ಪಾನಗೋಷ್ಠಿ

ಖುಷಿಗೋ ದುಃಖಕ್ಕೋ... ಅಂತೂ ನಮ್ಮ ಸಾಹೇಬರು ಪಾರ್ಟಿ
ಇಟ್ರು
ನಾಗರಿಕ ಮನುಷ್ಯನಿಗೆ ಬೇಕಾದ ಮಂದಿ ಹಾಜರು
ಸುದ್ದಿ ಮಾಡುವವರು ಸುದ್ದಿ ಆಗುವವರು ಸುದ್ದಿಯಲ್ಲಿರುವವರು
ತಮ್ಮ ವೃತ್ತಿಗತ್ತಿನಲ್ಲೆ ಮೆರೆಯುತ್ತಿದ್ದರು...

ಸಾಹೇಬರು ಪಾನಗೋಷ್ಠಿಯ ವಿಶೇಷತೆ ಹೇಳಿದ್ದೆ
ಗಾಜಿನ ಗ್ಲಾಸಿಗೆ ಗ್ಲಾಸು ಬಡಿದು ಟಳ್‌ಪಳ್ ಸದ್ದಾದವು
ಮೊದಲ ಸುತ್ತಿನಲ್ಲಿ ಎಲ್ಲರೂ ಮಾಮೂಲು..
ದೇಶ... ಜನ.. ಹುರಿಶೇಂಗಾ ಚಿಪ್ಸ್ ಜೊತೆಗೆ ಚರ್ಚೆ

ಒಬ್ಬ ಹೇಳುತ್ತಾನೆ... ನೋಡ್ರಿ ಈ ಮನುಷ್ಯ ಅಂತರ್ಮುಖಿ
ಎಷ್ಟು ಕೊಟ್ಟರು ಸರ್ಕಾರದ್ದೆ ಬೇಕೆಂಬ ಹಪಹಪಿ
ಮತ್ತೊಬ್ಬ ಹೇಳುತ್ತಾನೆ. ಭೂಮಿ ಮನುಷ್ಯನ ಬದುಕಿಗೆ ಅಯೋಗ್ಯ
ಮೂರನೆಯವನು ನೋಡಿ ಏಟ್ಸ್ ಕವಿ ಹೇಳ್ತಾನೆ
ಮರುಹುಟ್ಟು ಪಡಿಬೇಕು ಜಗತ್ತೆಂದು...

ಎರಡನೆಯ ಸುತ್ತು ರಂಗೇರಿತ್ತು
ಖಾರದ ಜೊತೆಗೆ ಕೋರ್ಟು, ಪಾರ್ಟಿ, ಪರ್ಸನಲ್ ಚರ್ಚೆ
ಆದರೂ ಟ್ರಾಕ್ ಬಿಡದ ಯೋಚನೆ
ಖಾಲಿ ಬಾಟಲುಗಳು ಕೆಳಗುರುಳಿದವು...

ಮೂರನೇ ಸುತ್ತಿನ ಮುಕ್ತಾಯಕ್ಕೆ.. ಧ್ವನಿ ಏರಿತು
ಇವನು ಅವನನ್ನ ಹಿಗ್ಗಾಮುಗ್ಗ ಹಣಿಯುತ್ತಿದ್ದಾನೆ
ಅವನು ಇವನ ಖಾಸಗಿ ಬದುಕನ್ನ ಕೆದಕುತ್ತಿದ್ದಾನೆ
ಖಾರ, ಬೀಜ, ಖಾಲಿ. ಈರುಳ್ಳಿ ಸೌತೆಗೊಂದಿಷ್ಟು ಚಟ್ನಿಯೇ ಗತಿ.

ಮತ್ತೆ ಚರ್ಚೆಗೆ ಬಂದ, ಮನುಷ್ಯ, ಯಾವನೊ ಸರಿ ಎಂದ
ಮತ್ತೊಬ್ಬ, ನೋ, ಅದೆಲ್ಲಾ, ಸುಳ್ಳು ಕಣ್ರೀ... ಬೋಗಸ್
ಮೂರನೆಯವನ ಪಿತ್ತ ನೆತ್ತಿಗೇರಿದ್ದೆ ನಡುವಿನ ಟೇಬಲು ಗಮನಿಸದೆ

ಕಾಲರ್ ಹಿಡುದು ಜಗ್ಗಿದ..

ಜಗ್ಗಾಟ ತಳ್ಳಾಟ.. ಮತ್ಯಾರೊ ಸಾಂತ್ವನ
ಮೂಲೆ ಟೇಬಲಿನ ಮಂದಿ ಕುಂತಲ್ಲೆ ಕಣ್ಣು ಮುಚ್ಚಿ ಜಪ
ಮಾಡುತ್ತಿದ್ದಾರೆ
ನಡುವೆ ಕುರುಕ್ಷೇತ್ರ. ಇದು ಮನುಷ್ಯನ ನಿಜಪ್ರವೃತ್ತಿ
ಮನೋವಿಕಲ್ಪದ ಶಕ್ತಿ.

ಸಾಹೇಬರು ಕಣ್ಣು ತೆರೆಯುವುದರೊಳಗೆ
ರಾಮ ಕೊಟ್ಟ ಕೋತಿಗಳಿಗೆ ಔತಣದ ಫಜೀತಿಯಾಗಿತ್ತು
ತಡವರಿಸಿ ಎದ್ದವರು ನಿಲ್ಲಲಾಗದೆ ನಡೆದರು
ಮತ್ತೆ ಕೆಲವರು ಮುಂದಿದ್ದ ಟೇಬಲೆ ಹಾಸಿಗೆ ಎಂದು ಬಗೆದರು
ಸಾಹೇಬರು ಮಾತ್ರ ಪಾನಗೋಷ್ಠಿ ಯಶಸ್ಸು ಕಂಡು
ನಿಶೆಯಲ್ಲೆ ಖುಷಿಗೊಂಡು ಕನವರಿಸತೊಡಗಿದರು.

ಕುಂತಿದ್ದ ಅಡಿಗೆಯವ ಚಪರಾಸಿ ಶೈತ
ಬೆಪ್ಪಾಗಿದ್ದರು. ಅವರ ಇಂಗ್ಲಿಷ್ ಬೈಗಳ ಕೇಳಿ
ಒಬ್ಬ ಹಿಂದಿ, ಮತ್ತೊಬ್ಬ ಇಂಗ್ಲಿಷ್, ಮರಾಠಿ,
ಕನ್ನಡದ ಶಬ್ದ ಕೇಳಲು ಕಾದಿದ್ದವರು ನಿರಾಶೆಯಿಂದ
ಥತ್... ಇವರಾ, ಈ ಮಂದಿ ನಮ್ಮ ದೇಶದವರ?
ಮುಖ ನೋಡಿಕೊಂಡು ನಾವೆ ವಾಸಿ ಎಂದುಕೊಂಡರು.

೨೭. ನಾಪೊಕ್ಲು

ಮತ್ತದೆ ನೆನಪು ಗುಡ್ಡ ಬೆಟ್ಟಕಾನನ
ಕಾವೇರಿ ಮೌನವಾಗೆ ಸಾಗುತ್ತಾಳಿಲ್ಲಿ
ಇರುಳ ಕೊರಳಿಗೆ ಪೋಣಿಸಿದ ಹಸಿರು ಹಾರ
ಸಂಜೆ ಸೆರಗಲಿ ಬೆಳಕ್ಕಿ ಸಾಲಿನ ಸಾಗಾಟ
ಎಂಥ ಪಾಮರನಿಗೂ ಎಚ್ಚರಿಸದಿರಲಾರದು ಸೊಬಗು
ಎಂಥ ಪುಣ್ಯ ಈ ಕೊಡವರದು
ಪಟ್ಟ ಪಾಡ ಅವಳೊಡನೆ ಹಂಚಿಕೊಳ್ಳುವ ಕ್ಷಣ
ಕಾಫಿ ಹೂವ ವಾಸನೆ ಕಿತ್ತಳೆ ಸಿಹಿ
ಯಾರು ಮಾಡಿದ ಗಾರುಡಿ
ಆಡಂನ ಇಡಿನ್‌ಗಾರ್ಡನ್ ನೆನಪು
ಎಂಥಾ ಕರುಣಾಳು ಸೃಷ್ಟಿಸಿದಾತ.
ಹಕ್ಕಿ ಪಕ್ಷಿ, ಕಾಡು ನೀರು.. ಅದ್ಭುತ ಸೃಷ್ಟಿ
ಹೌದು ಸೌಂದರ್ಯ ನೋಡುಗನ ಕಣ್ಣೊಳಗಿದೆ
ಕರುಣಾಳು ಮೆದುಳು
ಬುದ್ಧಿವಂತ ಹೃದಯ ಬೇಕು
ಜಗದ ಸೊಬಗ ಉಳಿಸೋಕೆ.



೨೮. ಆಶಾವಾದಿಗಳಿವರು

ಯಾರದಿ ಬದುಕು ಹಾಳೆಯ ತುಣುಕುಗಳಂತೆ
ದೇಶದಂಗಳದಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದೆ
ಆರಿಸಿ ಹಸನು ಮಾಡುತ್ತೇವೆ ಅಂದುಹೋದವರು
ಬುದ್ಧ, ಬಸವ, ಅಂಬೇಡ್ಕರ.

ಎಲ್ಲಿ ಮಾರ್ಕ್ಸ್ ಎಂಜಲ್, ಲೆನಿನ್
ದುಡಿದವರ ಕೈಗೆ ದುಗ್ಗಾಣಿ ದಕ್ಕಿಸಿದವರು
ಈ ನೆಲದೊಳಗೆ ನಲುಗಿದವರ ನಡುವೆ ಬರಲೇ ಇಲ್ಲಾ
ದಕ್ಕದ ಹಕ್ಕ ಕೂಡಿಸಲೇ ಇಲ್ಲಾ.

ಹೌದಿಲ್ಲಿ ಹಲವರ ಬದುಕಿಗೆ ಅರ್ಥವಿರುವುದಿಲ್ಲ
ಹುಟ್ಟಿದ ಸ್ಥಿತಿಯ ಹೆಗಲಿಗೇರಿಸಿ ಹೊರಟು ಬಿಡುತ್ತಾರೆ
ಪಟ್ಟ ಪಾಡನ್ನೆ ತಮಟೆ ಮೇಲಿನ ಹಾಡಾಗಿಸುತ್ತಾ
ಹಸಿವು ಹಾದರಕ್ಕೆ ಆಮಂತ್ರವಿತ್ತಂತೆ.

ಕಾಯುತ್ತಾರೆ ಸಾಮ್ಯುವೆಲ್ ಬಕೇಟನ ಪಾತ್ರಗಳಂತೆ
ಬರಲಿಲ್ಲಾಂಥ ಆ ದಿನ
ಬರುತ್ತದೆ ನಾಳೆ ಬೆಳಗಿನ ಜೊತೆಗೂಡಿ
ಅಗೋ ಹೊರಟರವರು ಹಳೆ ಜಾಗಕೆ.



೨೯. ಕರುಳಿಲ್ಲದವರು

ಮುಖವಿಲ್ಲದವರು
ಮನಸೇ ಇಲ್ಲದವರು
ಮರು ನುಡಿಯದವರು
ಮಣ್ಣಾಗುತ್ತಾರೆ... ಮರತ್ಹೋಗುತ್ತಾರೆ.

ಮಾತಿಲ್ಲದವರು ಕತೆಯಾಗದವರು
ವ್ಯಥೆಪಡದವರು
ಕನಸಾಗುತ್ತಾರೆ ಕಳೆದ್ಹೋಗುತ್ತಾರೆ

ಕಣ್ಣು ತೆರೆಯುವ ಮುನ್ನ

ಕನಸು ತೆರೆಯುವ ಮುನ್ನ
ಮಾಯಾವಾಗುತ್ತಾರೆ
ಮುಗಿಲ ಸೇರುತ್ತಾರೆ



೩೦. ನನ್ನಾಳದ ನೆನಪು

ನೀ ಇಲ್ಲದ ಆ ಕ್ಷಣಗಳೆ ಹೀಗೆ
ಬಾಯ್ದೆರೆದ ಕರಿ ನೆಲ
ಮಳೆ ಹನಿಯ ಬಯಸುವಂತೆ
ನೀರಿಲ್ಲದ ಬಾಲ ಮೋಡದ ಕುಡುಗು
ಬೆಡಗು ತೋರದ ಭ್ರಮೆಯ ಬದುಕಿನಂತೆ

ತೆರೆಸರಿದು ಅನಾವರಣಗೊಂಡ ಸಜ್ಜಕೆ
ರಂಗುರಂಗಿನಾಟ
ರಂಗೇರದ ಬದುಕು
ನಿರೀಕ್ಷೆಯ ನುಸಿ ಉದುರಿದಂತೆ

ಭಾವನೆಗಳು ನೂರ್ಮಡಿಸಿ
ಮತ್ತೆ ಆ ದಿನ ಬಂದಂತೆ
ಬರಿ ಹಾಳು ನೆನಪುಗಳೆ
ಎದೆ ಗೂಡಿನ ತುಂಬ ಹಳೆ ಪಳಿಯುಳಿಕೆಯಂತೆ.



೩೧. ಮನದ ಮರೀಚಿಕೆಯಾಚೆ

ಕನಸು ಮಾರುತ್ತಾರೆ ಇಲ್ಲಿ
ಬ್ಯಾಗಿನವನು
ಬೂಟು, ಚಪ್ಪಲಿಯನ್ನಿಟ್ಟವನು
ಕದ್ದು ಕನ್ನಡಕ ತೋರಿಸಿ ಟೋಪಿ ಹಾಕುವವನು
ಹುಲಿಯಂತೆ ಹೊಂಚು ಹಾಕಿ ಕುಳಿತ
ಪಿಕ್‌ಪಾಕೇಟ್ ಮಾಡುವವನು.

ಶೇಂಗಾ, ಕಳ್ಳೆಪುರಿ, ಸೌತೆ ಕಬ್ಬಿನರಸ
ಮಾರುತ್ತಲೆ.. ಮುಂದಾದವರು
ಬೆಲ್ಟು, ಕರ್ಚಿಪು, ಕ್ಯಾಲೆಂಡರ್ ರಾಶಿ ನಡುವೆ
ಕೋಟಿ ಆಶೆಗಳನ್ನು ಹೊತ್ತು
ಅಗೋ ಅಲ್ಲಿ ಬಂದ ದಲ್ಲಾಳಿ
ಆಟೋ,
ಲಾಡ್ಜ್
ಸ್ತ್ರೀ
ನಕಲಿ ಹಣ
ಜಗತ್ತಿನೆಲ್ಲಾದಂದೆಗೂ ತಯಾರಿ

ನಮ್ಮ ಹಳ್ಳಿ ಪೋರ
ದಿಲ್ಲಿಯ ಸೇಟು
ಬಿಳಿದೊಗಲಿನ ಬಾಂಬೆ, ಗುಜರಾತಿ.
ದೇಶ ಬಿಟ್ಟೋಡಿ ಬಂದ ವಿದೇಶಿಗ
ಕಳ್ಳ
ಸುಳ್ಳ
ಖದೀಮ
ಆತಂಕವಾದಿ
ಕುಖ್ಯಾತ
ಪ್ರಖ್ಯಾತ ಜನ

ಕೂಡಿಯೆಸಾಗಿ
ದಾರಿ ಸವಿಸುತ್ತಾರೆ

ಜಗದೆಲ್ಲಾ ಜನರ ಬಯಕೆ
ಈಡೇರುವುದೇ ಇಲ್ಲ
ಹಣ, ಹೆಣ್ಣು, ಮಣ್ಣು
ಸಿಕ್ಕು
ಮತ್ತೆ ಮಾಯವಾಗುತ್ತವೆ
ಮೆಜೆಸ್ಟಿಕ್ ಎಂಬ ಮಾಯಾಲೋಕದಲ್ಲಿ.



೩೨ ಕವಿತೆ...

ಕವಿತೆ ಎಂದರೆ ಸರಾಯಿ ಬಾಟಲಿಯಿಂದ
ಗ್ಲಾಸಿಗೆ ಸುರಿದ ತೊಂಬತ್ತು ಎಂ.ಎಲ್.ನಂತೆ
ಎಂದ ಕವಿಯೊಬ್ಬ
ಬಾರಿನೊಳಗೆ ಬೀರ ಹೀರುತ್ತ
ಧೋಖಾಕೊಟ್ಟವಳ ನೆನಪಸುತ್ತ ಪದಗಳನ್ನ ಹೆಣೆಯುತ್ತ
ದೂರಪಯಣಿಸುತ್ತಿರುವಂತೆ....

ಕವಿತೆ ಎಂದರೀತನಿಗೆ ಪುಸ್ತಕಗಳಿಂದ
ಸಾಲಿಗೆ ಸಾಲು-ಶಬ್ದಕ್ಕೆ ಶಬ್ದ
ಹೆಕ್ಕಿ ಹೆಕ್ಕಿ ಹೈಜಾಕ್ ಮಾಡಿ
ಹೆಣೆದು ಹೆಣೆದು
ಸ್ತ್ರೀಶಕ್ತಿ ಪಡೆದು ಪ್ರಖ್ಯಾತಿ ಪಡೆದಂತೆ

ಕವಿತೆ ಎಂದರೆ ಗಲ್ಲಿಸುತ್ತಿ
ಅನುಭವಿಸಿ ಒತ್ತಾಯದಿಂದ ಪ್ರಸವಿಸುವಂತೆ

ಕವಿತೆ ಎಂದರೆ.....
ಮುಂಜಾನೆ ಸವಿನಿದ್ದೆಯನೊದ್ದು
ಎದ್ದು ಬರೆಯಲು ಕುಂತಂತೆ

ಕವಿತೆಗುಂಟು ಕೋಟಿ ಡೆಫನೇಷನ್
ಯಾವುದು ನಿಜ
ಯಾರು ಹೇಳಿದ್ದು, ನಿಜ ಸತ್ಯವನ್ನ.



೩೩ ಸೂರ್ಯ ಮತ್ತು ನಾನು

ಮುಂಗಾರ ಮಳೆ ಬಂದ ಮಾರನೆ ದಿನ
ಹಸಿರುಹುಲ್ಲು, ರಾಗಿ ಗರಿಯ ಮೇಲಿನ ಮಳೆ ಹನಿ
ಮುತ್ತಿನಂತೆ ಹೊಳೆಯುತ್ತಿತ್ತು
ಧಾರವಾಡ ಎಮ್ಮಿಕೇರಿಯ ಹಿಂದಿ ಪ್ರಚಾರ ಸಭಾದ ಹಿಂದಿನಾವರಣದ
ಇಳಿ ಜಾರಿನೊಳೊಂದು ಆಲದ ಹೆಮ್ಮರ
ಬಿಳಿಲು ನೆಲಕ್ಕೆ ಮುಟ್ಟಿ ಮರವಾದಂತೆ
ಎರಡರ ಸಂದಿನೊಳಗಿಂದ ಸೂರ್ಯನೆಳೆ ಕಿರಣಗಳು
ಇಣುಕಿದ್ದವು.
ಅದೆಂಥ ಸುಂದರ ಮನಮೋಹಕ ದೃಶ್ಯ.

ಭುಜಂಗ ಶೆಟ್ಟಿಯ ಡಬ್ಬದಂಗಡಿಯಲ್ಲಿ
ಒಂದೇ ರುಚಿ ಉಪ್ಪಿಟ್ಟು,
ಒಳ ಹೋಗಲು ಕಷ್ಟಪಡುತ್ತಿತ್ತು.
ಇದ್ದಕ್ಕಿದಂತೆ ಹೊಳೆಯುತ್ತಿದ್ದ ಸೂರ್ಯನೆಳೆಕಿರಣಗಳು
ನನ್ನೊಳಗೆ ಕಾಡುತ್ತಿದ್ದ ಹುಡಗಿಯಂತೆ
ಬೆಳಂಬೆಳಗ್ಗೆ ಕಂಡಿದ್ದು.

ಇಪ್ಪತ್ತು ವರುಷದಮಾತು
ಧಾರವಾಡಕ್ಕೆ ಹೋದಾಗೊಮ್ಮೆ
ಭುಜಂಗ ಶೆಟ್ಟಿಯಂಗಡಿ
ದಕರು ಸಾಬಿಯ ಇಸ್ತ್ರಿಯಂಗಡಿ
ಸಂತೋಷ ಅನ್ನೋನ ಬೀಡಾದಂಗಡಿ
ಬಳಸಿ - ಹಿಂದಿ ಪ್ರಚಾರದ ಕಡೆ ನೋಡುತ್ತೇನೆ
ರಸ್ತೆ ಇಳಕಲ್ಲಿನಲ್ಲಿ ಮರವಿಲ್ಲ
ಕಾಂಕ್ರೀಟ್ ಮನೆ ಮುಗಿಲೆತ್ತರಕ್ಕೆ ನಿಂತಿದೆ
ಪೂರ್ವಕ್ಕುದಯಿಸೋ ಸೂರ್ಯ
ಬಿಲ್ಡಿಂಗ್ ದಾಟಿ ಬರಲಾರ.

'Love at first sight'
ಅದೊಂದೆ ದಿನ

ಮತ್ತೊಂದೆಂದು ಸಿಗಲೇ ಇಲ್ಲಾ ಆ ನೋಟ
ಎದೆಯ ಗೋಡಾನಿನೊಳಗೆ
ಅಳಿದುಳಿದ ಹಾಳು ಸಾಮಾನುಗಳಂತೆ
ಆ ನೋಟದ ನೆನಪು ನನ್ನೊಳಗೆ ಅಡಗಿದೆ
ಹೇಳಲು ಭಾಷೆ ಎಟಕುತ್ತಿಲ್ಲಾ
ಬರೆಯಲು ಶಬ್ದಗಳೇ ಸಿಗಲಿಲ್ಲಾ
ಹೆರದ ಕೂಸಿನ ಪ್ರಸವ ವೇದನೆ ಹೊತ್ತು ತಿರಗಾಡುತ್ತಿದ್ದೇನೆ.
ಮತ್ತೊಂದಾದರೂ ಕಂಡಾನೆಂಬ
ಹುಸಿಭರವಸೆಯ ಹೆಗಲಗೇರಿಸಿಕೊಂಡು.



೩೪ ಹೊಸಯುಗದ ಮನುಜ

ನನ್ನೊಳಗಿನ ಮನುಜ ದಿಕ್ಕುದೆಸೆ ಕಾಣದವ
ಹೆಪ್ಪು ಗಟ್ಟಿದ ವ್ಯವಸ್ಥೆಯೊಳಗೆ
ಹೆಮ್ಮರವಾಗುತ್ತಲೆ ಮುಗಿಲು ಮುಟ್ಟಿದವ
ಬತ್ತಿದ ಸೆಲೆಯೊಳಗೆ ಬೊಗಸೆ ನೀರ ಹುಡುಕುತ್ತಾ
ಬದುಕಿರುವ ಜನರೆದೆಯೊಳಗೆ ನಿಜ ಮನುಷ್ಯನ ಹುಡುಕುವವ.

ಬೋಕಿಯೋಳ್ ಹುಟ್ಟಿದಿ-ಮೂರು ಲೋಕಗಳ ಸಂಚರಿಸಿ
ಕುಲದ ಬೇರಿಗಾಗಿ ಪರಿಪರಿಯಾಗಿ ತಡಕಾಡಿದಾಂವss
ಅಣ್ಣಾ ಬಸವನ ಶರಣರ ಕೊಂಡಾಡಿ
ಬುದ್ಧದೇವನ ತತ್ವಗಳನ್ನನುಸರಿಸಿದಾಂವss
ಬರಡು ನೆಲದೊಳಗೆ ತನ್ನಸ್ಥಿತ್ವದ ಬೇರ ಹುಡುಕ ಹೊರಟವ

ಈ ಮನುಷ್ಯ ಗಡಿಯಾಚೆ - ಗುಡಿಯಾಚೆ ಗಾವುದ ಗಾವುದಸಾಗಿ
ಹೊಸದೊಂದು ಬಧುಕ ಹುಡುಕಲು ಹೊರಟವ
ಬಾಂಬುಗಳಿಲ್ಲದ್ದು
ಧರ್ಮ-ಜಾತಿಗಳಿಲ್ಲದ್ದು
ತರತಮವೇ ಇಲ್ಲದ್ದು
ಬಾನು-ಭೂಮಿ- ಕಾಡುಹಕ್ಕಿ ಸ್ವಚ್ಛಂದವಾಗಿ
ನೆಮ್ಮದಿ ಸೂಸುತ್ತಿದೆ
ಬುದ್ಧನ ನಾಡಿನ ನೆಮ್ಮದಿ ಸೂಸುತ
ಹಸಿವಿಲ್ಲದ - ಹಾದರವಿಲ್ಲದ - ದ್ವೇಷವಿಲ್ಲದ ನಾಡು
ಮಕ್ಕಳೆಲ್ಲಾ ಹಾಡುತ್ತಿದ್ದಾರೆ ನೆಮ್ಮದಿಯ ಹಾಡು

ನನ್ನೊಳಗಿನ ಮನುಜ ನಗುತ್ತಿದ್ದಾನೆ ಖುಷಿಯಿಂದ
ಮುಗಿಲೊಳಾರ್ಭಟಿಸಿದ ಸಿಡಿಲು ಅಣುಬಾಂಬಾಗೆ
ನಲುಗಿ ಹೋದ.... ನೆನಪಿಲ್ಲದ ಘಟನೆಯಂತೆ
ನಾನೀಗ ಭಾವನೆ ರಹಿತ ಹೊಸಯುಗದ ಮನುಷ್ಯ
ಬಾಂಬಿನ ದಾಳಿಗೆ ಸ್ಪಂದಿಸಲಾರೆ
ಕಿವಿಯಿದ್ದರೂ ಕೇಳಲಾರೆ ಬಾಯಿ ಇದ್ದರೂ ಮಾತಾಡಲಾರೆ
ಕಣ್ಣಿದರೂ ನೋಡಲಾರದ ಮೌನ ಪ್ರೇಕ್ಷಕ.

೩೫. ಪಯಣ

ಅವ್ವನ ಗರ್ಭದಲ್ಲಿ ಕೂತು
ಕನವರಿಸುತ್ತಿದ್ದೆ ನಾನಂದು
ರಕ್ತ- ಮಾಂಸವನೊದ್ದು
ಕತ್ತಲ ಜಗತ್ತಿನಿಂದ
ಬೆಳಕಿನೆಡೆಗೆ ಬರಲು ಹಾತೊರೆಯುತ್ತಿದೆ.

ಗರ್ಭವೆಂಬ ಗವಿಯೊಳಗೆ
ಆಕಾರವಿಲ್ಲದೆ-ವಿಕಾರವಾಗಿ ತೊಳಲಾಡುತ್ತಿದ್ದೆ
ಓ ಇದೆಂಥ ಬಂಧನ?
ಸ್ವತಂತ್ರ- ಹಕ್ಕಿಯಾಗಿ,
ಮುಗ್ಧತೆಯ ಮೀಟುಗೋಲನ್ನೂರಿ ನಡೆಯ ಬಯಸಿದೆ.


ಬೆಳೆದ - ಬದುಕು, ಕವಲ ದಾರಿಯಾದೊಡೆ
ಬೆಳಕ ಬಣ್ಣ ಅರಿಯದಾದೆ
ಗೋಡೆಗಳು ಸುತ್ತ ಬರಿಗೋಡೆಗಳು
ಬಿಡಿಸಿಕೊಳ್ಳಲಾಗ ಬದುಕ ವ್ಯಾಮೋಹ
ಬರ್ಬರ ಬದುಕಿನ ಜರ್ಜರತೆ ಹೊತ್ತು ಸಾಗುತ್ತಿದ್ದೇನೆ.

ಹೌದು ಬೆಳಕ ನಡುವೆಯೂ
ಗಾಂಧರಿಗೆ ಅಂಧಕಾರ ಕವಿದಂತೆ
ಬೆಸೆದ ಸಂಬಂಧಗಳು- ಹೆಬ್ಬಾವುಗಳಂತೆ ಹೊಸೆದು ಕೊಂಡಿವೆ
ಹಸಿ ಹಸಿ ಹುಸಿ ಕನಸುಗಳು
ಕಮರಿ ಹೋಗುತ್ತಿವೆ ನಿರಾಶೆ ಪಾಪ ಕೂಪದಿ.

ನಾಯಿ ನರಿಗಳ ಜೊತೆಗೆ ಸೆಣಸಾಟ
ಗಟ್ಟಿಗೊಳ್ಳಲಿಲ್ಲಾ ಈ ವ್ಯವಸ್ಥೆಯೊಳಗೆ
ಅದೇ ಬದುಕು
ಬದಲಾಗಲಿಲ್ಲಾ ಭವಣೆ.

ಮರವೇರಿದ ಅತೃಪ್ತ ಜೀವ ಕೂಗುತ್ತಿದೆ
ಓ ಗೆಳೆಯ ಕೇಳು, -
ನೆನಪಿದೆಯಾ ನಿನಗೆ

ಒಡಂಬಡಿಕೆಗಳೆಲ್ಲಾ ಸುಳ್ಳು.
ಮತ್ತೊಮ್ಮೆ ಕೂಗುತ್ತಿದೆ
ನಾನು.... ಹೀಗೆ ಶತಶತಮಾನದ ದಾರಿದ್ರ್ಯ ಹೊತ್ತು
ಹೊರಲಾಗದೆ ಇಳುಹಲಾಗದೆ ತೊಳಲುತ್ತಿದ್ದೇನೆ.
ಅವರು ಹೀಗೆ ಮೇಲೆ - ಮೇಲೆ ಸಾಗುತ್ತಿದ್ದಾರೆ
ಇಳುಹಲಾರದ ಭಾರ ಶಾಪವೆಂಬಂತೆ
ಹೊತ್ತು ಸಾಗುತ್ತಿದ್ದೇನೆ ಇಂದಿಗೂ....



೩೬. ಆ ದಿನಗಳು...

ನನ್ನ ಕಣ್ಣಳತೆ ದೂರದಲೆಲ್ಲೋ ಇಹವು
ಬಾಲ್ಯದ ಆ ದಿನಗಳು
ಜಾತ್ರೆಯಲ್ಲಿ ಕೊಂಡ ಬಣ್ಣದ ಕನ್ನಡಕ
ವಾಚು, ಉಂಗುರ, ಪೀಪಿ
ಕೆಂಪುಗಾಜಿಂದ ಆಗಸವೆಲ್ಲ ಕೆಂಪು ಕಂಡ ಖುಷಿ ಇಲ್ಲವಲ್ಲ ಈಗ.

ಹನುಮ್ಯಾ, ಪೀಕ, ಗನಿಯಾ, ಕುಂಟ, ಪದ್ದಿ
ಯಾರವಳು ಕುಣಿ ಕುಣಿದು ಕಣಿವೆ ಏರಿದ್ದು?
ಓ, ಮರದಿಂದ ಬಿದ್ದನಲ್ಲ ಮರಕೋತಿಯಾಟದಲಿ
ಗೋಲಿ ಗೆದ್ದವನೆಲ್ಲಿ?
ಹುಡಕುತ್ತಿದ್ದೆನೆ ಅವರನ್ನ

ಅರ್ಥವಿಲ್ಲದ ಹರಟೆ ಹೊಡೆದದ್ದು
ಹುರುಪಿನಿಂದ-ಶೇಂಗಾ, ಕಬ್ಬು, ಕಲ್ಲಂಗಡಿ ಕದದ್ದು
ಮುಂಗಾರ ಮಳೆಯೊಳಗೆ ಕುಣಿದಾಡಿದ್ದು
ಎತ್ತು ಮೇಯಿಸಿದ್ದು- ದನಕಾದದ್ದು
ಏಡಿ- ಮೀನು ಹಿಡಿದದು
ಮತ್ತೆಂದೆಂದು ಬಾರದಾವಸ್ಥೆಯಲ್ಲಿ ಕುಂತು ಕೆದಕುತ್ತೇನೆ.

ಅಂತರಂಗದ ತುಂಬ ಅಲ್ಲೋಲ ಕಲ್ಲೋಲ
ಬಿ.ಪಿ., ಸಕ್ಕರೆ, ನಡನೋವು ಒಂದೆರಡೆ
ಪಳಿಯುಳಿಕೆಯಂತೆ ನೆನಪು
ಕಾಡುತ್ತಲಿವೆ ಎಡಬಿಡದೆ
ವಿರಾಮದ ನಂತರ.... ಪೂರ್ಣ ವಿರಾಮ
ಉಸಿರುನಿಂತು ನಂತರವೆ.

ಎತ್ತ ಸಾಗಿದೆ ಬದುಕು?
ಅರ್ಥವಾಗದ ಪ್ರಶ್ನೆ.
ಸಾಧಿಸಿದ್ದು- ಗಳಿಸಿದ್ದು - ಉಳಿಸಿದ್ದು.
ಪ್ರಶಸ್ತಿ, ಪರಾಕು - ಪ್ರಶಂಸೆ

ನಿರರ್ಥಕ ಬದುಕು-ಬೇಕೆ ಇವು ಮನುಜನಿಗೆ
ನನ್ನೆದೆಯೊಳಗೆ ಹದ್ದಾಗಿ ಕುಕ್ಕುತಿಹ ಪ್ರಶ್ನೆಗಳ ಹೆಗಲಿಗೇರಿಸಿ
ಉತ್ತರಕ್ಕಾಗಿ... ಮತ್ತೆ ಹೊರಟೆ ಪಯಣ.
ಬೆಚ್ಚಗೆ... ಜಂಜಡದಿಂ ದೂರವಿರಲಿಗ
ಅಮ್ಮನ ಗರ್ಭದಾಸರೆ ಎಲ್ಲಿ?



೩೭. ಹೀಗೊಂದು ಆತ್ಮದ ಕತೆ

ಆತ್ಮ - ಪರಮಾತ್ಮ ಲೊಳಲೊಟ್ಟೆ
ನನಗೆ ಆತ್ಮ - ಪ್ರೇತಾತ್ಮ ಅವು ಇವು ಬರಿ ಸುಡಗಾಡು
ಕೆಲವರು ಜಿದ್ದಾಜಿದ್ದಿಗೆ ಬೀಳುತ್ತಾರೆ
ನನಗದು ಬೇಕಿಲ್ಲ
ಜಗ ನಂಬುವುದೇ ಸತ್ಯ.

ನೆಲೆ ಇಲ್ಲದೆ ಅಲೆಯುತ್ತಿದೆ ಒಂದು ಜೀವ
ಅದನ್ನೆ ಪಂಡಿತರು ಆತ್ಮವೆಂದರೈ
ಹಾಗಾದರೂ ಆದೀತು.
ಜಾಲಿಮುಳ್ಳುಗ ನಡುವೆ
ಹಳೆ ಹಣಸಿಮರ ಗಳಿಗೆ ಜೊತು ಬಿದ್ದು
ಹಪಹಪಿಸುತ್ತಿದೆ
ಹಳಹಳಿಸುತ್ತಿದೆ ತನ್ನಾವಸ್ಥೆ ಕಂಡು.

ಹುಟ್ಟಿದಾಗಿಂದ ಹೊಟ್ಟೆ ಬೀರಿಯೊಮಟ ಉಣ್ಣುವ ಕನಸು
ಕಂಡಿತಂತೆ ಒಮ್ಮೆ
ಲೇ... ಮಗನೆ.. ಬಳಿ ಸಗಣಿ
ಒಡೆಯನ ಧನಿಗೆ ಅಂಜಿ ಬೆಚ್ಚುಬಿದ್ದು
ಕನಸಲೋಕದಿಂದ ಎಚ್ಚತ್ತು ತಡವರಿಸುತ್ತಾ

ಮತ್ತದೆ ಹಳೇಯ ನೆನಪು
ಭೂಮಾಲಿಕನ ಮಗಳ ಮದುವೆಯಲಿ
ಹೊಟ್ಟೆ ಬಿರಿಯುವಂತೆ ಉಂಡಿದ್ದು ಬರಿನೆನಪು.



೩೮. ಸ್ಥರಗಳು

ಮೇಲೆ ಆಗಸ- ಕೆಳಗೆಲ್ಲೋ ಪಾತಾಳ
ನಡುವೆ ತೇಲಾಡುತಿಹ ಭೂಮಿ
ಶ್ರೇಣೀಕೃತ ಬದುಕು ಶುಷ್ಕವಾಗಿದೆ ಇಲ್ಲಿ
ಮನಸು- ಹೃದಯ ನಡುವೆ ಗೋಡೆಗಳು
ಕಾಡುತ್ತಿವೆ ಮನುಷ್ಯರನ್ನ ಎಡಬಿಡದೆ

ಕೋಮು - ಕೋಮಲವಾಗೆ ಕೊರಳ ಕೊಯ್ಯುವಾಗ
ಕಾಮಾಲೆ ಕಣ್ಣವರಿಗೆ ಹೃದಯದಾಳದ ಪ್ರೀತಿ
ಕಾಡುವುದಿಲ್ಲಾ ನೆನಪಾಗಿ.
ಮಾತುಕೊಟ್ಟವಳು ಮಸಣ ಮಾಡಿದ್ದಾಳೆ ತನ್ನೆದೆಯ
ಮೌನದ ಹಂದರದಲಿ ನೆನಪ ಮೆರವಣಿಗೆ

ಯಾರದು? ಹಿಂದೂ, ಮುಸ್ಲಮಾನ್, ಜೈನ
ಕ್ರೈಸ್ತನೇ?
ಯಾರೋ ಕೂಗಿದರಲ್ಲ. ಕೊರಚ, ಕೊರಮ, ಲಂಬಾಣಿ
ಹೊಲೆಯ, ಶೆಟ್ಟಿ, ಲಿಂಗಾಯಿತ
ಎಷ್ಟೊಂದು ಸ್ಥರಗಳು
ಎಲ್ಲಿಯವರೆಗೆ?

೩೯. ಶಬ್ದವಲ್ಲದ ಸಾವು

ಕಾಣೆಯಾಗಿದ್ದಾಳೆ ಹುಡುಗಿ
ನನ್ನಂತರಾಳದಲೆಲ್ಲೋ
ಪೆದ್ದು ಪೆದ್ದಾದ ದಡ್ಡ (Stupid)
ಮುದ್ದು ಮುದ್ದಾದ ಬೆಡಗಿ.

ಮೊನ್ನೆ ಕಂಡಿದ್ದಳು
ವೈಯಾರ ಮಾಯವಾಗೀಗ
ಗಜಗಾಮಿನಿಯ ಗಂಭೀರ
ನಾನು ಗೋಚರಿಸಿದೊಡನೆ ದೂರ ಓಡಿದಳು.

ಕಾಡುತ್ತಿದ್ದಾಳೆ ಕನಸಿನ ತುಂಬ
ಕದಡಿದ ಕೊಳವಾಗೆ ಮನ
ಕಲ್ಲು ಹೊಡೆದು ನೆನಪಿನ ಹುತ್ತಕ್ಕೆ
ಓಡುತ್ತಾಳೆ ಕ್ಷಣಾರ್ಧದಲಿ ಕಣ್ಣಿಗೆ ಕಾಣದಂತೆ

ಎಚ್ಚರಾದಾಗೊಮ್ಮೆ ತಡಕಾಡುತ್ತೇನೆ
ಸುತ್ತಲ ಶೂನ್ಯದೊಳಗೆ
ಶವವಾದ ನಿರವತೆಯಲ್ಲಿ
ಶಬ್ದವಿಲ್ಲದ ಸಾವು ನೆನಪಾಗೆ

ಕಾಣೆಯಾದವಳ ಕಳೆ ಬರಹ ಹುಡುಕ ಹೊರಡುತ್ತೇನೆ
ಪ್ರಕೃತಿಯ ಮಡಿಲೊಳಗೆ
ಎಲ್ಲೋ ಮರೆಯಾದ ಮೌನ
ಮತ್ತೆ ಮೌನ ಕಾಡ ತಂಬ.



೪೦. ಮಂಜು

ಕತ್ತಲ ಕತ್ತು ಹಿಸುಕಿ ಕೊಸರುವ ಮುನ್ನ
ಹುಲ್ಲಗರಿಯ ಮೇಲೆ ಚೆಲ್ಲಾಟವಾಡುವ
ಸೂರ್ಯನುದಯಕ್ಕಂಜಿ ಕರಗಿ ನಿರಾಗೊ ಮುನ್ನ
ಎನ್ನ ಮನ ಸೇರಿದ ಹನಿ ಹನಿ ಮಂಜು.

ಸುಡುಬಿಸಲ ಸೂರ್ಯನಿಗಂಜಿ ಕರಗುವೆಯಾದರೆ ಕರಗು
ನನ್ನಂತರಂಗದಲೆಯಲ್ಲಿ ನೆಲೆ ನಿಲ್ಲು ಒಂದು ಕ್ಷಣ.
ಸರಸ ಸಲ್ಲಾಪಗಳ ಸುಮಧುರ ಕ್ಷಣ ನೀ ತಂದೆಯಾದರೆ
ರಾಗಿ ಹುಲ್ಲಮೇಲೆ ಮುತ್ತಂತೆ ಹೊಳೆ ಹೊಳೆದು ಮರೆಯಾದೆ

ಹೊಳೆವ ಹೊಳಪು ಕಳೆದು ಕೊಳ್ಳುವ ಮುನ್ನ
ನನ್ನೆದೆಯ ಮಿಡಿತ ನೂರ್ಮಡಿಸುವ ಮುನ್ನ
ಸೂರ್ಯನ ಚುಂಬನಕ್ಕೆ ಚೆಲ್ಲಿ ಹೋಗುವ ಮುನ್ನ
ಬಾ ನನ್ನ ನೆನಪಿನಾಳಕೊಮ್ಮೆ

ಕವಿಯ ಕವನದ ಸೃಷ್ಟಿಯಾಗಿ
ನನ್ನೊಲುಮೆಯ ದೃಷ್ಟಿಯಾಗಿ
ನಿತ್ಯ ನೂತನ - ಚೈತನ್ಯವಾಗಿ
ಬಾ ಮಂಜು ನನ್ನೆದೆಗೊಮ್ಮೆ ಬಾ.



೪೧. ನೆನಪು

ನೆನಪೊಂದು ಕನಸಿನ ಹಾಗೆ
ತೆರೆದಿಟ್ಟ ಮನಸಿನ ಹಾಗೆ
ಬೀಸೋ ತಂಗಾಳಿ ಸೂಸೊ ಪರಿಮಳ
ದಂತೆ

ಒಲವರಳಿದ ದಿನಗಳಂದು
ಕಳೆದ ಇರಳುಗಳಂತೆ
ಬಾರದ ದಿನಗಳು ನಮ್ಮ
ಬೇಟೆಯಾಡಿ ಕೊಂದಂತೆ

ಇತಿಹಾಸದ ನೆನಪುಗಳ
ಎದೆಗೂಡೊಳು ಕೂಡಿಟ್ಟಂತೆ
ಕವಲೊಡೆದ ಬದುಕಿನ
ಕಲಹಕೆ ತಂಪೆರದ ಹಾಗೆ



೪೨. ಹೆಜ್ಜೆಗಳು

ಅಜ್ಜನ ನೆತ್ತಿಯ ಮೇಲೆ ರಾಜನೊತಿದ್ದ
ಗುಲಾಮಿ ಹೆಜ್ಜೆಗಳ

ನೂಪುರಗಳಾಗಿದ್ದ ಅಜ್ಜ
ಮಹಾರಾಣಿಯ ಮೃದುಪಾದಗಳಿಗೆ
ರಾಜನ ಸಿಂಹಾಸನದಡಿಯಲ್ಲಿ
ಅಜ್ಜನ ಕನಸುಗಳು ಹೂತು ಹೋಗಿದ್ದವು.

ಅಪ್ಪನ ಹೆಗಲ ಮೇಲೆಲ್ಲಾ
ಬ್ರಿಟಿಷರ ಕೆಂಪು ಕೆಂಪಾದ
ಬೂಟಿನ ಗುರುತು

ಸಾಲ ಮರಗಳಿಗೆ ನೇತು ಬಿದ್ದ ಹೆಣಗಳು
ಅಪ್ಪನ ಸಾವಿನ ಪ್ರತೀಕಗಳು

ನನ್ನ ಸ್ವತಂತ್ರಗೊಳಿಸಲು ಅಪ್ಪ
ಬ್ರಿಟೀಷರಿಗೆ ಬೆನ್ನು ಕೊಟ್ಟಿದ್ದ
ಇರಿದಿರಿದು ಹರಿದು ಹಂಚಿದರು ದೇಶ
ಹೌದಪ್ಪಗಳಿಗೆ...

ಅಪ್ಪಗೆ ತಿಳಿದಿರಲಿಲ್ಲಾ
ನನಗೆ ಸ್ವತಂತ್ರವೇ ಇಲ್ಲವೆಂದು

ಹೆಜ್ಜೆಗಳು ಬೆಳೆಯುತ್ತಲೇ ಇವೆ
ಮುಗಿಲೆತ್ತರಕೆ

ನನ್ನ ಕುಬ್ಜಗೊಳಿಸಿ
ದೈತ್ಯ ರೂಪವತಾಳಿ...

೪೩. ಈ ಮಹಾನಗರದ ಮೂಲೆಯಲ್ಲಿ

ಈ ಮಹಾನಗರದ ಮೂಲೆಯಲ್ಲಿ
ಮನಸುಗಳು ಮಾತನಾಡುತ್ತವೆ
ಮೌನ ಮುರಿದು
ಕ್ರಿಕೇಟಿಗರ ಗುಂಪು
ಸಂತೆಯಲ್ಲೂ ಚಿಂತಿತ ಜನ
ಕಾಂಕ್ರೀಟ್ ಕಾಡಿನಲ್ಲೂ
ಕಾಣದ ಕೋಗಿಲೆಯೊಂದು ಕಿಚಗುಡುತ್ತದೆ.
ಕಿವಿಗಿವುಡಿಕ್ಕುವ ಸದ್ದಿನಲ್ಲೂ
ಇಂಪಡರುವಂತೆ.

ಹಸಿವಿಗಾಗಿ ಹಾದರದ ಹಾದಿ ಹಿಡಿದವಳು
ಏಡ್ಸ್ ಹರಡುವ ತಾಣವಾಗಿದ್ದಾಳೆ
ಒಂದು ಕಾಲದ ಹಳ್ಳಿ ಹಳ್ಳಿಗಳೆಲ್ಲಾ
ಕಳೆದು ಹೋದಂತೆ
ಕುಳಿತಿದ್ದಾರಲ್ಲಿ ಕೊಳಚೆ ಜೀವಿಗಳು

ಕೋಟು ಬೂಟಿನ ಕಚೇರಿ ಮಂದಿ
ಕಿಸೆ ತುಂಬಿಕೊಳ್ಳುತ್ತಾರೆ
ಬಡವರ ಉಸಿರನ್ನ
ಬಾಚಿಕೊಳ್ಳುತ್ತಾರೆ ಬೆವರ ಪಾಲನ್ನ
ಕೆಲವರಿಗೆ ಮೋಜಾದರೆ ಕೆಲವರಿಗೆ ನರಕ

ಕಳೆದುಕೊಳ್ಳುತ್ತಾರಿಲ್ಲಿ ಎಲ್ಲವನು
ಯಾರಿಗೂ ಯಾರಿಲ್ಲ
ಯಾಂತ್ರಿಕತೆಯಂತ್ರ
ಬೆನ್ನು ಬಿಡದ ಭೂತ ಸ್ಪರ್ಧೆ

ಮುಂಜಾನೆ -ಸಂಜೆ ನಡುರಾತ್ರಿ ಒಂದೇ
ಓಡುವುದು ಕಾಲನ ಹಿಂದೆ
ಬಸ್ಸು, ರೈಲು, ಟ್ಯಾಕ್ಸಿ, ಜೀಪು
ಬುಳು ಬುಳು ಹುಳುಗಳಂತೆ ಮಂದಿಗಳದ್ದೆ
ಮಹಾಸಾಗರ

ಶೀಲವಿಲ್ಲದವರು ಸಾಲಕೋರರು
ಕೊಲೆಗಾರರು ಕಳ್ಳ ಖದೀಮರು
ಯೋಜನೆ ಹಾಕುತ್ತಾರೆ
ರದ್ದಿ ಆರಿಸುವ ಹುಡುಗ
ಕೆದರುತ್ತಾನೆ ಹೊಲಸು

ಮಹಾನಗರದ ಮೂಲೆಯಲ್ಲಿ
ತಣ್ಣಗೆ ಎಲ್ಲವೂ ನಡೆಯುತ್ತವೆ
ಹಗಲು- ರಾತ್ರಿ
ದಿಕ್ಕು ದಸೆಗಳಿಲ್ಲದೆ
ದಕ್ಕಿದನದೆ ದೊಡ್ಡ ಪಾಲು
ದಕ್ಕದವನು ಮುಕ್ಕುತ್ತಾನೆ ಮಣ್ಣು

೪೪. ನಾನೊಬ್ಬನೆ

ನಾನೊಬ್ಬನೆ ನನ್ನ ಸುತ್ತ ಸುಳ್ಳು
ನಗುವಿನ ನಾಟಕ
ಅಳುವಿನ ಮೋಜು ಗೋಜು
ಬುಟಾಟಿಕೆ ಬಲೆಗಳು

ಒಬ್ಬನೇ ಕುಳಿತು
ನಿಸರ್ಗದ ಸವಿ ಸವಿಯುತ
ಮುಖವೆತ್ತಿ ಆಗಸದ ಕೂಗಿಗೆ
ಕಿವಿಗೊಟ್ಟಾಗ ನಿಜವಾಗಿಯೂ ನಾನೊಬ್ಬನೇ

ನಾ ಅತ್ತಾಗ ನನಂತರಂಗ
ನಾ ನಕ್ಕಾಗ ಹೃದಯದ ಕಂಪನ
ಇವೆರಡು ಬಿಟ್ಟು
ನಾ ನಿಜವಾಗಿಯೂ ಒಬ್ಬನೇ

ಭಾವನೆಗಳಿಗೆ ಬಂಧಿಯಾಗಬಹುದು ನೀವು
ಮಾತುಗಳಲ್ಲಿ ಮೋಡಿಮಾಡಬಹುದು
ಮತ್ತೆ ಯೋಚಿಸಿದಾಗ
ಇದ್ದಲ್ಲೇ ಇದ್ದೆ ನಾನೊಬ್ಬನೆ

ಹೊರೆಹೊತ್ತಾಗ ಬರಿಕನಸು
ಇಳುಹಿದಾಗ ಬರಿಮನಸು
ಜೀವದ ಜಂಜಡ ತೊರೆದಾಗ
ಮಣ್ಣಿನಲಿ... ನಾ ಒಬ್ಬನೆ

೪೫. ಮಾನವರಿಲ್ಲದ ನಾಡಿನಲ್ಲಿ

ಮಾನವರಿಲ್ಲದ ನಾಡಿನಲ್ಲಿ
ಮನಸುಗಳಿಗೆ ಅರ್ಥವೇ ಇಲ್ಲ
ರಕ್ತ ಬೀಜಾಸುರನ ಸಂತಾನದಲ್ಲಿ
ಸಮಾನತೆ ಹುಡುಕ ಹೊರಟರಲ್ಲಾ

ಕಂಬಾಲಪಲ್ಲಿಯಲಿ
ನಂಜುಕಾರುವ ಹಗಲು, ನರಕವಾಯ್ತು ಇರಳು
ಸಾವು ನೆತ್ತಿಯ ಮೇಲೆ ತೂಗು ಕತ್ತಿ
ಕೊನೆಗೂ ಜೀವಿಗಳು ಜೀವಂತವಾಗಿಯೇ ಬೆಂದು ಹೋದವೇ?

ಹೌದು ಗೆಳೆಯ ತಪಗೈದ ಶೂದ್ರ ತಪಸ್ವಿಯ ಕೊಂದು
ಇತಿಹಾಸ ಮಾಡಿದವರುಂಟಿಲ್ಲಿ
ವಿದ್ಯೆ ಕೊಡದೆ ಹೆಬ್ಬೆರಳು ಕೇಳಿದವರು
ಭೂತ ವರ್ತಮಾನದಲಿ ನೂರ್ಮಡಿಸುತಿಹರು

ಮನಬಿಚ್ಚುವ ಮುನ್ನ ಕನಸ ಕೊಂದವರದೆ
ಕಾರುಬಾರು
ಉಮ್ಮಳಿಸಿದ ದುಃಖ ತಡಕೊಂಡು
ಬಿಕ್ಕುತಿಹಳಿಲ್ಲಿ ಬಾಲೆ ಗುಡಿಸಲಲ್ಲಿ

ಸಹಿಸದಷ್ಟು ಪೆಟ್ಟು ಬೆನ್ನ ಮೇಲೆ
ಕ್ಷಣ ಕ್ಷಣವೂ ಅವಮಾನದ ಕಟು ಟೀಕೆಗಳು
ಮಾನವರಿದ್ದಾರೆಯೇ? ಬುದ್ಧ ಬಸವ ಗಾಂಧಿ
ಅಂಬೇಡ್ಕರರಂಥವರು
ಹಸಿದೊಡಲ ತಣಿಸಿದ ದಲಿತನ ಚಿತೆ ನಂದಿಸುವವರು
ಅಂತರಾಳದ ಅಸಹಾಯಕತೆ
ಕಿಡಿಕಾರುವ ಕೆಂಪು ಸೂರ್ಯನಂತೆ
ಹೊತ್ತುಕೊಂಡು ಉರಿಯುತ್ತಿದೆ ಕತ್ತಲನ್ನು ಲೆಕ್ಕಿಸದೆ
ಸ್ಫೋಟಗೊಂಡರೆ ಉಳಿಯುವುದೆ ವ್ಯವಸ್ಥೆ
ಹೊಣೆ ಯಾರು ಅದಕೆ
ಒದೆಯುವವರ ಕಾಲ್ಚೆಂಡಾದ ನಾವೋ
ಬರಿ ಒದೆಯುತ್ತಲೇ ಬಂದ ನೀವು
ಕಾಲನೊಬ್ಬನಿಗೆ ಗೊತ್ತು ಕಾಕತಾಳಿಯುತ್ತರ.

೪೬. ಶೋಧನೆ

ನಮ್ಮೊಳಗಿನ ಅವನು
ಎಲ್ಲಿ ಹೊರಟು ಹೋದನೋ?
ಪಾತ್ರ ಮಾಡುವವನು
ಬಯಕೆಗಳ ಜಾಡು ಹಿಡಿದು
ಅಖಾಡಕ್ಕಿಳಿದು ಬಿಡುವವನು
ಬೆನ್ನು ಬಿಡನು ನೆರಳಂತೆ
ಸಂಜಯನಾಗಿ ಕುರುಡು ಕೌರವಗೆ
ಲಕ್ಷ್ಮಣನಾಗಿ ರಾಮನಿಗೆ
ಬೆನ್ನು ಬಿಡದವನು
ರೂಪ ಕಂಡೊಡನೆ ಕೊಸರಿಕೊಂಡು ಓಡುವವನು
ನಗುವ ಗ್ರಹಿಸಿ ಹಿಡಿದುಕೊಳ್ಳಲು ಕೊಸರಾಡುವವನು
ನನಸಾದಾಗ, ನೆನಪು ಮಾಡಿಕೊಳ್ಳುವವನು
ವಯಸ್ಸಾದಂತೆ ತೆರೆಹಿಂದೆ ಸರಿದು
ಪಡೆದ ಸುಖವನ್ನೆಲ್ಲಾ ಕೂಡಿಸಿ ಕಳೆದು
ಉಳಿದದ್ದನ್ನು ಹಾಸಿಕೊಂಡು ಮಲಗಿದವನು
ಎಲ್ಲಿ ಹೋದನೋ?

ಬಾಲ್ಯದೊಳಗಾಡಿದ ಆಟ
ಮಣ್ಣು ಕೆಬರಿ ಹುಡುಕುತ್ತಿರಬೇಕು
ಕಳಕೊಂಡ ನೆನಪು
ಓತಿಕಾಟವ ಕೊಂದು ಬಾಯಿಗೆ ಕೀಲು ಎಣ್ಣೆ ತುಂಬಿ
ಮಣ್ಣು ಮಾಡಿ
ಕಾಸಿನ ಆಸೆಗಾಗಿ ಕೆದರಾಡಿದವನು
ಒಂಟಿಯಾದಾಗ ಕನ್ನಡಿ ಮುಂದೆ
ಕೋತಿಯಂತೆ ಕುಣಿದಾಡಿ
ಕತ್ತಲಾದೊಡನೆ ಬೆಳಕಿಗಾಗಿ ಹಂಬಲಿಸಿ
ಚಾದರ ಎಳೆದುಕೊಂಡು
ಉಸಿರು ಬಿಗಿಹಿಡಿದು ಮಲಗಿದವನು
ಎಲ್ಲಿ ಹೋದನೋ?

ಯಾವ ವೇಷ, ಯಾವ ಪಾತ್ರ
ಯಾವ ಸನ್ನಿವೇಷಕ್ಕಾಗಿ
ಹುಡುಕಾಟ ನಡೆಸಿರುವನೋ
ಬಲ್ಲವರಾರು?



೪೭. ಅಸ್ತಿತ್ವ

ನಾನು ಶೋಧಿಸುತ್ತಿದ್ದೇನೆ
ನನ್ನ ಅಸ್ತಿತ್ವದ ಬೇರುಗಳಿಗಾಗಿ
ಬರಡು ಭೂಮಿಯಂತಿರುವ
ಅವ್ಯವಸ್ಥೆಯಾದ ವ್ಯವಸ್ಥೆಯಲಿ.

ಎಲ್ಲೋ ಸಿಕ್ಕಿಕೊಂಡಿತ್ತು ಚೂರು
ನೆನ್ನೆ ಮೊನ್ನೆಯವರೆಗೆ ಅಲ್ಲಿ ದಂಗೆ ಎದ್ದಾಗ
ಮತ್ತೆಲ್ಲೋ... ಹುಡುಕಾಟ,

ನನ್ನೊಂದಿಗೆ ಹುಟ್ಟಿದ ವಿಚಾರಗಳು
ಜೀವಂತವಾಗೆ ಸುಡುತಿವೆ ಎನ್ನ
ವರ್ಣಗಳಲೆಲ್ಲಾ ಜಾಲಾಡಿ
ಸಿಕ್ಕರೂ ಸಿಗಬಹುದೆಂದು,

ಮೂಲವರಿಯದ ಮೂಢರಿಗೆ
ತಿಳಿಸಬೇಕೆಂದುಕೊಂಡಿದ್ದೆ.
ಮೂಲ ಅರಿಯದ ನಾನು
ಮಾತಾಡದೆ ಮೌನಿಯಾಗಿದ್ದೇನೆ...

೪೮. ಎಂಟಾಣೆ ಮತ್ತು ಜೋಗತಿ

ನೂರ್ಗರಿಯಿಂದ ಸಿಂಗರಿಸಿಕೊಂಡ ಕೊಡ
ಮುನ್ನೂರು ವಿಚಾರಗಳಿಗೆ ಸ್ಪಂಧಿಸುವ
ಪುಟ್ಟಿ ತಲೆಯ ಮೇಲೆ ಹೊತ್ತು
ಉಧೋ ಎನ್ನುತ್ತಿಹಳು ಬಾಲೆ

ಪರಿಪರಿಯ ಕಲ್ಪನೆಗಳ ಹೆಣೆಯುತ್ತ
ಜನಜಂಗುಳಿಯಲ್ಲೂ ಬೇರೊಂದು ಲೋಕದಿ
ವಿಹರಿಸುತ್ತ
ಧಾರವಾಡ ಲೈನ್ ಬಜಾರ್‌ನಲಿ
ಹೊರಟಿದ್ದೆ ಒಂದು ದಿನ

ಎದಿರು ಕೈಚಾಚಿ ನಿಂತಾಗ
ನಾಸ್ತಿಕ ಭಾವನೆ
ಹರೆಯದೊತ್ತಡದಲ್ಲೂ ದೇವರಿಗೆ ಬಲಿ
ಮೂಡಿ ಮುಳುಗಿದ ಭಾವನೆಗಳು ಅರ್ಥವಾಗಲೇ ಇಲ್ಲಾ

ನಂಬಿಕೆಗಳೆಲ್ಲಾ ನನ್ನ ಬಿಟ್ಟು ಹೋಗಿದ್ದವು
ಸುಂದರ ವದನದೀ ಅಸ್ಪಶ್ಯಳಿಗೇಕೆ ಒಲಿಯಬೇಕು
ಬೇರಾರು ಸಿಗಲಿಲ್ಲವೇ ಬಡವರ ಹೆಣ್ಣು ಬಿಟ್ಟು?
ವಿಚಾರಗಳ ತಾಕಲಾಟದಲಿ ಕೈ ಜೇಬಿಗಿಳಿದು ಎಂಟಾಣೆ
ಅವಳ ಕೈ ಸೇರಿತ್ತು.

ಭಾವನೆಗೂ ಬದುಕಿಗೂ
ಇರುವ ನಂಟನ್ನ ತರ್ಕಿಸದೆ...
ನೆಲೆ ನಿಲುಕುವಂತೆ ಕಾಣಲೇ ಇಲ್ಲಾ
ಒಳಗಿನ ಸುಪ್ತ ಭಾವನೆಗೆ ಬೆರಗಾಗಿ ನಾ ನಕ್ಕೆ

೪೯. ಕ.ವಿ.ವಿ. ಗ್ರಂಥಾಲಯದಲ್ಲೊಂದು ಸಲ

ಧೂಳು ತಿಂದ ಪುಸ್ತಕಗಳ ಘಾಟು ವಾಸನೆಯಲ್ಲೆಂದು
ಮಲ್ಲಿಗೆ ಕಂಪು ಅಡರುವುದಿಲ್ಲಾ.
ಹಾಳೆಗಳ ತೀಡಿ ತೀಡಿ
ಹಾರುವ ಮನಸು ಹಿಡಿ ಹಿಡಿದು
ಓದಿ ಬಳಲಿದ ಮನಕೆ
ಮುದ ನೀಡುವ ಕನಸು
ಪುಸ್ತಕ ಹುಡುಕುವಾಗ ಕಳಕೊಂಡದ್ದು
ಸಂಧಿ ಸಂಧಿಯೊಳಗೆ ಹುಡುಕಿದರೂ
ಸಿಗಲಿಲ್ಲವಂದು,
ತಿಂದ ತಂಬಾಕು ಉಗುಳಲೆಂದು ತೆರೆದ ಕಿಟಕಿ
ನುಗ್ಗಿದ ಗಾಳಿ ತಂಪೆನಿಸಿದಾಗ
ಬರೆದದ್ದು ಓದಿದ್ದು ವ್ಯರ್ಥವೆನಿಸಿ
ಹೊಸ ಬದುಕಿನ ಆವಿಷ್ಕಾರದ ಆತುರ
ಅವೇ ರಾತ್ರಿಯ ಮೂಲಕಾಟಗಳು
ಹಗಲಿನ ಗಂಭೀರತೆ
ಕಳೆದು ಹೋಯಿತೆ ಯವ್ವನ
ಹಿಡಿದಿಡಬೇಕೆಂದರೆ?
ಪಕ್ಕದ ಫ್ರಾಕಿನ ಹುಡುಗಿ
ಹವಳದಂತ ತುಟಿಗಳಿರಳಿಸಿ
ದಾಳಿಂಬೆಯಂತ ದಂತ ಪಂಕ್ತಿ ತೋರಿದಾಗ
ಹದಿನಾರು ನೆನಪಾತು
ಎಷ್ಟು ಬೇಗ ಕಳೆದು ಹೋಯಿತು ಹೊತ್ತು?
ಮನದ ಹಸಿವು ಇಂಗಲಿಲ್ಲಾ
ಪುಸ್ತಕದ ಹಂಗು ತೀರಲಿಲ್ಲಾ
ಮೇಲಿನಿಂದ ಕೆಳಗೆ
ಕೆಳಗಿನಿಂದ ಮೇಲೆ
ಅಡ್ಡಾಟದ ಸರ್ಕಸ್ಸಿನ ನಡುವೆ
ಸಂಶೋಧನೆಯ ಹುಡುಕಾಟ
ನಡೆದೇ ಇದೆ ನಿರಂತರ.

೫೦. ಟ್ರೆಂಕ್ ಮತ್ತು ಇತಿಹಾಸ

ಅವ್ವನ ಹರಕು ಸೀರೆ,
ಅಪ್ಪನ ತಾತಾನೂ ತೂತಾದ ಧೋತರ
ಉಡಲು ಬಾರದ ನನ್ನ ಹಳೆ ಅಂಗಿ
ಒಂದಿಷ್ಟು ಹರಕು ಅರವಿ

ಯಾವ ಕಾಲದ್ದೊ ನುಸಿಮುಟ್ಟಿ
ಹಿಡಿದರೆ ತರಗಲೆಯಂತೆ ಕರಕರ ಸದ್ದು ಮಾಡಿ
ಉದುರಿ ಹೋಗುವ ಒಂದೇ ಒಂದು ಪುಸ್ತಕ
ಅವ್ವನಿಗೂ ತಿಳಿಯದು ಅದರ ಇತಿಹಾಸ
ರಕ್ಷಣೆ ಪಡೆಯುತ್ತಿವೆ ಟ್ರಂಕ್ ಎಂಬ ತಗಡಿನ ಡಬ್ಬದಲ್ಲಿ

ಚಿಲಕ ಬಿಡಿಸಿದರೆ ಸುರುಮಾಡುವುದು ಕಿರಲಸದ್ದು
ಮೇಲೆತ್ತಿದ್ದರೆ ಯಾರೋ ಸತ್ತರೆಂಬಂತೆ ಶೋಕ
ಅವ್ವಗೊಬ್ಬಳಿಗೆ ಗೊತ್ತಿದ್ದ ಸತ್ಯ, ನಮಗೆ ತಿಳಿಯಲಿಲ್ಲ
ಸದ್ದು ಮಾಡದು ಈ ತಗಡಿನ ಸಂದೂಕವೆಂಬುದು.
ಸಿಕ್ಕ ಕೈಕಾಸು ಅರವಿಯೊಳಗೆ ಕಟ್ಟಿ
ಇಡಿಗಂಟು ಮಾಡಿ ಇಟ್ಟಿಹಳಂತೆ ಇದರೊಳಗೆ
ತಿಳದಿಲ್ಲ ಯಾರಿಗೂ ನಿಧಿಯ ರಹಸ್ಯ.

ಆರಡಿ ಗುಡಿಸಲೊಳಗೆ ಮೂರು ಮೇಕೆ ಮರಿ
ಒಂಬತ್ತು ಮಂದಿಯ ವಾಸ
ಅಲ್ಲವೆ ಮನುಕುಲದ ಪ್ರತೀಕ
ಕೊನೆಯಾತ ಮಗ್ಗಲಾದೊಡನೆ
ಕೈಯೋ, ಕಾಲು ಬಡಿದು ದಡ್ ಬಡ್ ಸದ್ದು
ಏಳ್ರೋ ಕಳ್ಳರು ಬಂದರು ಎಂದು ಕೂಗಿದಂತೆ
ಕದ್ದವನಿಗೂ ನಾಚಿಕೆಯಾದೀತು ಇದ ಕಂಡು

ಅಪ್ಪನ ಅಜ್ಜನ ಅಜ್ಜನ ಕಾಲದ ಟ್ರೆಂಕು
ಮುರಿದ ನಾಕು ಮೂಲೆಗಳು
ಮೇಲೆ ಮುಚ್ಚಲೊಂದು ಮುಚ್ಚಳ
ಚಿಲಕ ಬೀಗ ಕಾಣದೆ ಬಿದ್ದಿದೆ

ಗೋರಿಯಾಕೃತಿ.
ಗುಡಿಸಲ ಮೂಲೆಯಲ್ಲಿ
ಮನೆ ಮರ್ಯಾದೆ ಮುಚ್ಚಿಡಲು ಇಹುದೊಂದೆ
ಪೂರ್ವಜರ ಪುಣ್ಯದ ಫಲ
ನಾನು-ನಮ್ಮಪ್ಪ ನನ್ನ ಮಗ
ಪ್ರೀತಿಸುತ್ತೇವೆ ಇದನ
ನಮ್ಮ ಇತಿಹಾಸದ ಪ್ರತೀಕವೆಂಬಂತೆ.

೫೧. ಸಮಾನತೆ... ಮತ್ತೊಂದಿಷ್ಟು

ಸಮಾನತೆ.... ಮತ್ತೊಂದಿಷ್ಟು
ನನ್ನ ಸಿಮೆಂಟಿನ ಮನೆ ಮೇಲೆ ಬೀಳುವ ಮಳೆ ಶಬ್ದ
ನಮ್ಮ ಗುಡಿಸಲಿನ ನೆನಪು ತರುತ್ತದೆ
ಅವ್ವನ ಸುತ್ತಲು ಒಣ ನೆಲದಲ್ಲಿ ಅವಿತುಕೊಂಡು
ಸುರಿಮಳೆ ಸೋರಿ ಒದ್ದೆಯಾದ ನೆಲ ನಿದ್ದೆ ಬಾರದ ಆ ರಾತ್ರಿ
ಗುಡುಗಿನಾರ್ಭಟ ಕೋಲ್‌ಮಿಂಚು
"ಓ ಅರ್ಜುನಾ ಇರ್ಲಿ ದಯಮಾಡು"
ಅವ್ವನ ಕೂಗು, ಹೊರಗಿಂದ ಒಳನುಗ್ಗಿ ನೆರಕಿ ಕಿತ್ತು
ಮನೆಯನ್ನ ಹಾರಿಸಿಕೊಂಡು ಹೋಗುವಂತೆ ಬೀಸಿತ್ತು.

ನನ್ನ ಹೆಂಡತಿ - ಮಕ್ಕಳನ್ನ ನೋಡಿದಾಗ
ಅಪ್ಪನ ಸುಕ್ಕುಗಟ್ಟಿದ ಕೆನ್ನೆ ಎಲುಬಿನ ಹಂದರವಾದ ಎದೆಗೂಡು
ಬದುಕಿಗಾಗಿ ಬಡಿದಾಡುತ್ತಿರುವ
ನನ್ನ ಒಡಹುಟ್ಟಿದವರು
ಚುಚ್ಚುತ್ತಾರೆ ಎದೆಯ
ನಾನು ಬದುಕಲಾಗದೆ ಅವರಿಗೂ ನೆರವಾಗದ
ನನ್ನ ನೌಕರಿಯ ಬಗ್ಗೆ ಜಿಗುಪ್ಸೆಯಾಗುತ್ತದೆ.

ಟಾರಿನ ಮೇಲೆ ಅಡ್ಡಾಡುವಾಗ
ಮಳೆ ಕೆಸರೊಳು ಕಾಲು ಹುದುಗಿದೊಡೆ
ಊರೊಳಗೆ ರೈತಾಪಿಗಳ ಚಕ್ಕಡಿ
ಹುದುಲೊಳಗೆ ಸಿಕ್ಕು ಹೊರಳಾಡಿದ್ದು
ನೆನಪಾಗುತ್ತದೆ.

ಹೌದು ಅದೇ ಬದುಕು ಅಂದು ನಾ ಬದುಕಿದ್ದು
ದೂರದಿಂದ ನೋಡುತ್ತೇನೆ,
ರಕ್ತದೊತ್ತಡ, ಹಾರ್ಟ್, ಸಿಹಿಮೂತ್ರ
ಆವರಿಸಿಕೊಂಡ ಸಿಟಿ ಜನರು
ತಿಂದು ತೇಗುತ್ತಾರೆ

ಉಣಲಿಲ್ಲದ ಹುಡುಗರು ಬೆರಗುಗಣ್ಣಿಂದ ನೋಡುತ್ತಾರೆ

ನಾನು ಮಾತ್ರ ನನ್ನ ಡಬ್ಬಲ್ ರೋಲ್ ನಟನೆ
ಸಾಕಾಗಿ, ಹೊಸ ಬದುಕಿನ ಆವಿಷ್ಕಾರಕ್ಕಾಗಿ ಕಾಯುತ್ತೇನೆ
ನನ್ನಂತ ನೂರು ಮಂದಿಗೆ ಸಮಪಾಲು ಸಿಕ್ಕು
ಸಮಾನ- ಮನಸು ಕಟ್ಟಲಿ ಸುಂದರ ಸಮಾಜವ.

೫೨. ಒಂದು ಜೀವ ಮತ್ತು ನಿದ್ದೆ

ಸುತ್ತ ಜಲದ ನಡುವೆಯೊಂದು
ಬೆತ್ತಲೆ ದೇಹ ನಿದ್ದೆಗಾಗಿ ಹೋರಾಡುತ್ತಿದೆ
ಮಳೆರಾಯ ಮುಗಿಲ ಹರಿದು ಧೋ ಎಂದು ಸುರಿಯುತ್ತಿದ್ದಾನೆ
ಯಾವ ಚಿಂತೆಯೂ ಇಲ್ಲದೆ ಮಲಗಿರುವುದೇ ಈ ಜೀವ?
ಹಳೆಯ ನೆನಪುಗಳೆಂದೊ ನಲಗಿಹೋಗಿವೆ.
ನಾಳೆಗಳ ಚಿಂತೆ ಎಂದೋ ಚಿತೆ ಏರಿವೆ
ಮೀನು ಮಾರುಕಟ್ಟೆಯ ಮುಂದಿನ ಜಾಗವೆ
ತನ್ನ ವಿಶ್ರಾಂತಿ ಧಾಮ.
ಹರಕು ಚಾದರ ಹೊದ್ದು ಗಡದ್ದಾಗಿ ಮಲಗುವ ನಾಟಕ
ಮಾತು ಮೌನಗಳ ನಡುವೆ ಸ್ನಿಗ್ಧಮನ.
ಉಂಡೂಟಕ್ಕೂ ಕಂಡುಂಡ ಬದುಕಿಗೂ
ಬರಾಬರಿ
ಬಿಡುಗಡೆಯ ಘಳಿಗೆ ಬಂದೀತು ಎಂದು
ಬಹು ಖುಷಿಯಿಂದಲೇ ಮುಸುಕೊಳಗೆ
ಮುಸಿ ಮುಸಿ ಅಳು.
ಬಾಡಿಗೆ ದೇಹ ಬಿಟ್ಟು ಹೊರಟೇನೆಂದು
ಹುಟ್ಟಿಸಿದವನ ಮೇಲೆ ದಾವ ಹೂಡಿ
ಉಲ್ಟಾ ತಿರುಗುವ ಮಂದಿಯಂತೆ
ದಾವೆ ಹಾಕೇನೆಂದರೆ ಕೋರ್ಟಿಲ್ಲಾ
ಪಟ್ಟ ಪಾಡನ್ನ ಬಿಟ್ಟು
ಹೋಗುವ ಪರಿಯ ನೆನೆಯುತ
ಬೆಳಗಿಗಾಗಿ ಕಾದು.
ಏಳಲಾಗದೆ, ಮಲಗಲೂ ಆಗದೆ
ನಾಟಕ ನಡೆದಿದೆ.... ನಿದ್ದೆ ಎಂಬ ನವಿರಾದ ಮೋಜಿನ
ಮಾಯಾಜಾಲದ ದೊಡ್ಡಾಟ.

೫೩. ರಾಡಿನೀರು ಮತ್ತು ಕಾಗೆ

ಹುಬ್ಬಿ-ಧಾರ್ವಾಡ ಮಾ ನಗರ ಪಾಲಿಕೆ
ನೀರು ಸರಬರಾಜು ಇಲಾಖೆ ಮುಂದೆ
ಸಣ್ಣದೊಂದು ಗುಂಡಿ, ಗುಂಡಿ ತುಂಬಾ ನೀರು
ರಾಡಿ ನೀರೊಳಗೆ ಕತ್ತು ಬಳಕಿಸಿ ನಡೆಸಿತ್ತು ಕಸರತ್ತು.

ಇತ್ತ ಮುಂಜಾವೂ ಅಲ್ಲ
ಅತ್ತ ಸಂಜೆಯೂ ಅಲ್ಲದ ಹೊತ್ತಲ್ಲಿ
ಭರ್ಜರಿ ಸ್ನಾನ ಗೈಯುತ್ತಿತ್ತೊಂದು ಕಾಗೆ
ರೀತಿ ನೋಡಿದರೆ ತಿಕ್ಕಿ ತಿಕ್ಕಿ ತೊಳೆದುಕೊಳ್ಳುತ್ತಿತ್ತೇನೋ

ಗಂಗಾ, ತುಂಗಾ, ಕಾವೇರಿಗಳೆಲ್ಲ
ಮನವೇರಿ ಬಂದವು
ಅರೆಬರೆ ನಗ್ನ ದೇಹ ಪ್ರದರ್ಶಿಸುತ್ತಾ
ಕಾಮಭಾವ ಅದುಮಿ ದೇವಭಾವ ಉಕ್ಕಿಸುತ್ತಾ

ಜಪತಪಾದಿಗಳ ಗೈಯುವ ಜನಕ್ಕೂ
ಕಾಕಮಜ್ಜನಕ್ಕೂ ತಾಳೆ ಹಾಕಿದ್ದೆ
ಆತ್ಮಶುದ್ಧಿಯೋ, ಪಾಪ ಹಾರಿಯೋ
ಛೇ... ಛೇ... ಹಾಗೇನೂ ಇಲ್ಲಾ ಬಿಡಿ,

ಷೇರು ಹಗರಣದಲ್ಲಿಲ್ಲಾ
ಬಾಂಬೂ, ಬಂದೂಕುಗಳಂತು ಗೊತ್ತೇ ಇಲ್ಲಾ
ವರದಕ್ಷಿಣೆ.... ಕೊಲೆ ಪಾಪ ಬಿಡಿ
ಮತ್ತೇಕೆ ಸ್ವಾಮಿ ಸ್ನಾನ....

ನೀವು ನಿತ್ಯ ಸ್ನಾನ ಮಾಡಿ
ಮಾಡಿದ ಕರ್ಮಗಳಿಂದ ಶುದ್ಧರಾಗುತ್ತೀರಿ
ಹುರುಪಿಗೋ ಹುಮ್ಮಸ್ಸಿಗೆ,
ರೆಕ್ಕೆ ತೋಯಿಸಿ ತನ್ನ ಲೋಕದಲ್ಲಿ ತಾನಿತ್ತು.

ಅದಕ್ಕೂ ತಿಳಿದಿದೆ ಗಂಗೆ- ತುಂಗೆಗಳೆಲ್ಲಾ
ರಾಡಿಗಿಂತ ರಾಡಿಯೆಂದು
ತನ್ನ ಪರಿಶುದ್ಧ ಮನಸ ಹೊತ್ತು
ರಾಡಿ ನೀರಲ್ಲೂ ಸ್ನಾನಗೈದರೇನಾಗದೆಂದು ಬಗೆದಿದೆ

೫೪. ದ್ವಂದ್ವ

ಕುಂತಿ ಕರ್ಣರೊಡಲೊಳಗೆ
ಎಡಬಿಡದೇ ಕಾಡಿತ್ತು.
ಅಶ್ವಥಾಮನನ್ನು ಕೊನೆಗೂ ಬಿಡಲೇ ಇಲ್ಲಾ
ವೈಶಂಪಾಯನ ಸರೋವರದಲಿ ಬೆವರಿ
ಬಸವಳಿದ ದುರ್ಯೋಧನ
ರಾಮನ ಅರಮನೆಯಲ್ಲಿ
ಎಲ್ಲರಂತರಂಗ ಹೊಕ್ಕೀತಿ ದ್ವಂದ್ವ
ಮನ್ನೆ ಪ್ರೊಕ್ರಾನ್‌ನಲ್ಲಿ ಸಿಡಿಸಿದ ಬಾಂಬ್
ಹೃದಯವಂತ ಜೀವಿಗಳಿಗೆ
ನಿದ್ದೆ ಬಾರದಂತೆ ಕಾಡಿತ್ತು.
ಮಡಿಯುಟ್ಟು ಮುಡಿಗೆ ಹೂವಿರಿಸಿ
ಶೃಂಗರಿಪ ಗೃಹಿಣಿಗೆ
ಗಾಂಧಾರಿಯ ಕುರುಡು ನಾಟಕದ
ಕಪ್ಪು ಪಟ್ಟಿಯಲ್ಲಿತ್ತು ದ್ವಂದ್ವ
ಕುಡಿದ ಮತ್ತಿನಲಿ ಅವಳೊಂದಿಗಾಡಿದ ಮಾತು
ಹಗಲ ಬೆಳಕಿನಂತೆ ನಷೆ ಇಳಿದಾಗ
ದ್ವಂದ್ವವಾಗೆ ಕಾಡಿದ್ದವು
ಬಿಟ್ಟರೂ ಬಿಡದ ಮಾಯೆಯಂತೆ
ದ್ವಂದ್ವ,
ಬದುಕ ಭರವಸೆ ಹುಸಿಗೊಳಿಸಿ
ಹಾರಾಡುತ್ತಿದೆ ಸುತ್ತಮುತ್ತ
ಹಿಡಿದರೂ ಕೈಗೆ ಸಿಗದಂತೆ.

೫೫. ಮಾರಲಿಟ್ಟ ಕನಸು

ನಿದ್ದೆಯಿಂದೆದ್ದಾಗ ಮುದುಡಿಬಿದ್ದ ಮಂದಾರದ ಹಾಗೆ
ಹೃದಯದ ಸುತ್ತಲು ಸತ್ತು ಬಿದ್ದ
ಕನಸುಗಳ ಆರಿಸುತ್ತೇನೆ.

ಮರೆತು ಹೋದವು ಹಲವು
ಮೂಕಚ್ಚಿ ಕನಸುಗಳು
ಮರೆಯದೆ ಕಾಡುವವು
ಮನಮಸಣದ ಹೆಣಗಳು

ಮಾರಲು ಇಟ್ಟಿದ್ದೇನೆ ಕನಸು
ಬುಟ್ಟಿಯಿಂದೊಂದು ಕಳುವಾಗಿದೆ
ಹುಡುಕುತ್ತಿದ್ದೇನೆ ನಿರಂತರ
ಸಿಕ್ಕೀತೆ ಸಿಕ್ಕರೂ... ದಕ್ಕೀತೇ,

ದರಿಯಾ ದೌಲತ್ ದಾರಿಯಲಿ
ದರಿದ್ರನಾಗಿ ಓಡಾಡಿ
ದರಿಯಾದ ದೊರೆಯಾಗೋ
ಅವಕಾಶ ಸಿಕ್ಕೀತೆ ಸಿಕ್ಕರೂ ದಕ್ಕೀತೆ,

ನನ ಕನಸುಗಳಲ್ಲೊಂದು
ಕೊಡಲೇ ನಿಮಗೊಂದು....
ಕಣ್ಣುರೆಪ್ಪೆಗಳಡಿಯಲಿ ಮುಚ್ಚಿಟ್ಟು
ಮುರಿದು ಬಿದ್ದ ಕನಸ ಮಹಲನು ಕಟ್ಟಿಕೊಡುವಿರಾ?

೫೬. ಮಾಳಿ

ಹೋಗುವಾಗೆಡಕ್ಕೆ ಬರುವಾಗ ಬಲಕ್ಕೆ ಬರುವ
ಆಳ ಮೇಲೆ ಮಾರೆತ್ತರದ ಮಣ್ಣಿನ ದಿಬ್ಬ
ಸುತ್ತ ಕಾಡಿದ್ದಿರಬಹುದು. ಕಿರುಬನಕಟ್ಟೆ
ದನಕಾಯುವಾಗ ಇದ್ದ ತಾಳೆ ಗಿಡಗಳ ಗುಂಪು
ಅಪ್ಪ ಹೇಳಿದ ಕತ್ತೆ ಕಿರುಬಗಳ ಕಥೆ.
ಗುಡಸಲ ಮುಂದೆ ಕುಂತಾಗ ದೀಪ ತೋರಿಸಿ
ಚೌಡಿಯ ದೇವರು ಅಲ್ಲಿಂದಿಲ್ಲಿಗೆ ಕಳಿಸಿತು.
ಒತ್ತರಿಸಿ ಬಂದಿದ್ದ ಒಂದನ್ನು ನಿಲ್ಲಿಸಿದ್ದು ನೆಪ್ಪು.

ಮಾಳಿ ಸುತ್ತೆಲ್ಲಾ ಸೌಳು ಮಣ್ಣು
ಕೆಸರರಾಡಿಯೊಳಗೆ ಸಿಕ್ಕು ಬಾರದ ಮಣಕ
ಮಳೆ ಬಂದಾಗ ಮಾಳಿ ಹತ್ತಿದ ದನಕಾಯುವ ಹುಡುಗರ ಹಿಂಡು
ಹೆಣ ಸುಡುವಾಗ ಅಲ್ಲಿಂದಲೆ ಇಣುಕುತ್ತಿದ್ದರು.
ಯಾವ ಇತಿಹಾಸವಿಲ್ಲದೇ,
ನಮ್ಮೂರ ಹುಡುಗರ ಬಾಯಿಯೊಳಗೆ ಮಾಳಿ
ಜನಜನಿತವಾಗಿದೆ.

ಹಿಂದೆ ದೊಡ್ಡ ಗುಡ್ಡವಿರಬಹುದೇ?
ಎಷ್ಟೋ ಜನರು ನಿರುತ್ತರರಾದರು
ಈಚಲು, ತಾಳೆ, ಬೇವಿನ ಮರಗಳ ತಾಣ
ಕೆರೆ ಬತ್ತಿ ಬೋಳಾದಂತೆ ಮರಗಳೆಲ್ಲಾ ಮಾಯ
ಉಳಿದಿರುವುದೊಂದೆ ಮಣ್ಣಿನ ದಿನ್ನಿ.

೫೭. ನೆನಪುಗಳ ಸುತ್ತ

ಈ ನೆನಪುಗಳೇ ಹೀಗೆ
ಹಳೆ ಮನೆಯ ಧೂಳಿನಂಗೆ
ಒಟ್ಟುಗೂಡುತ್ತವೆ ಗುಡ್ಡದಂಗೆ
ಹೆಪ್ಪು ಗಟ್ಟುತ್ತವೆ ಹಿಮಾಲಯದಂಗೆ

ಗೋಡೆಯ ಮೇಲೆ ಕೀ ಕೊಡದ ಗಡಿಯಾರ
ನೂರು ವರ್ಷದಿಂದ ನಿಂತಂತೆ
ತಲೆಯಲ್ಲಿ ತೂಗುತ್ತವೆ
ತಾಗಿ ತಾಗಿ ಎದೆಯ ನೋಯಿಸುತ್ತವೆ

ಮುಷ್ಟಿಯೊಳಗೆ ಹಿಡಿದ ಉಸುಕಿನಂತೆ
ಬಿಡಿಸಿಕೊಂಡೊಯ್ಯುತ್ತವೆ
ಮೂಲೆಯಲ್ಲಿಟ್ಟ ಮೂರ್ತಿಯಂತೆ
ಮೂಕನನ್ನಾಗಿಸಿಬಿಡುತ್ತವೆ

ಹೆಣೆಯುತ್ತವೆ ಹಣೆಬರಹದ ಸುತ್ತ
ಜೇಡನ ಬಲೆಯಂತೆ ಜಾಡ
ಜಾಡಿಸಿದರೂ ಜೋತು ಬೀಳುವ
ಜಾಯಮಾನಕ್ಕೆ ಸೇರಿವೆ

ಕಿತ್ತೆಸೆದರು ಕತ್ತು ಹಿಸುಕಿ
ಕವಲುದಾರಿಯಾಗಿಬಿಡುತ್ತವೆ ಎಡೆಬಿಡದೆ
ಬಣ್ಣದ ಬುಗುರಿಯ ಮಾಡಿ ತಿರುಗಿಸುತ್ತವೆ
ತಗಾದೆ ಪ್ರಪಂಚದಿ.

೫೮. ಮಾತಿನ ಜಾಡಿಗುಂಟ

ಮಾತು ಬರಿ ಶಬ್ದಗಳ ಜೋಡಣೆಯಲ್ಲ
ಕೆಲವರ ಮಾತಿಗೆ ಅರ್ಥವಿರುವುದಿಲ್ಲ
ಕಣ್ಣು ಮನಸಿನಲ್ಲಿ ಕದ್ದಾಡುವ ಮಾತು
ಹೊಸದೊಂದು ಹಸಿಬಿಸಿ ಕವಿತೆಯಂತೆ
ರಾಮನಾಡಿದ ಮಾತು ಸೀತೆಗೆ ಮುಳುವಾಯಿತು
ಅಗಸನ ಹುಸಿಮಾತು ಇತಿಹಾಸವಾಯ್ತು
ಕೊಟ್ಟ ಮಾತು ಬಿಟ್ಟ ಬಾಣಗಳೆಂದು ರೀಲು
ಬಿಟ್ಟ ಭೂಪರೆಲ್ಲಾ
ಮರಳಿ ಬರಲೇ ಇಲ್ಲಾ,
ಮಾತು ಮುದ ನೀಡುತ್ತವೆ ಹಲವರವು
ಕೇಳಿದರೂ ಸಾಲದು ಮತ್ತೆ ಕೇಳಬೇಕು ಹಲವರವು
ವರ್ಷನೀರಿನಂತೆ
ಬತ್ತದ ಸೆಲೆಯಂತೆ
ಕತ್ತಲು ಬತ್ತಲಾದಾಗಿನ ಪಿಸುಮಾತು
ಆಡಿದವರೆದೆಯೊಳಗೆ ಹೂರಣದಂತೆ
ಮುಪ್ಪಿನಲ್ಲಾಡುವ ಪ್ರಯತ್ನ ಪೂರ್ವಕ ಮಾತು
ಯಾರಿಗೂ ಹಿಡಿಸದ ಹಾಗಲಕಾಯಿಯಂತೆ
ಕೆಲವರಾಡುವ ಕರ್ಣಕಠೋರ ಮಾತು
ಕೇಳುವರ ಎದೆಗೆ ನಾಟಿತ್ತು.
ಹದಿಹರೆಯದಲ್ಲಿ ಅಪ್ಪ ಹೇಳಿದ ಮಾತು
ಅವಳ ಮಾತಿಗಿಂತ ಸಪ್ಪೆಯಾಗಿತ್ತು.
ಹೌದು ಈ ಮಾತುಗಳೇ ಹೀಗೆ ಮೌನ ಮುರಿಯುತ್ತವೆ
ಎದೆ ಬಿರಿಯುತ್ತವೆ.
ಸ್ಮೃತಿಪಟಲದಿ ಸದ್ದಿಲ್ಲದೆ ಅಡಗಿಸಿಕೊಳ್ಳುತ್ತವೆ.
ಹಸಿದ ಹೊಟ್ಟೆ, ಖಾಲಿ ತಟ್ಟೆ
ಮೈಕೊರೆವ ಚಳಿಯಲಿ

೫೯. ಕಪ್ಪು ಹೃದಯದ ಬಿಳಿಹುಡುಗಿಯರು

ಸೂರ್ಯನೂ ಒಮ್ಮೊಮ್ಮೆ ನಾಚಿಕೊಂಡು
ಮೋಡದೊಳಗೆ ಸರಿಯುತ್ತಾನೆ
ಬಿಳಿದೊಗಲಿನ ಬಿನ್ನಾಣಗಿತ್ತಿರ ಕಂಡು

ಭೂಮಿಯ ಮೇಲೆ ಕಾಲಿಡದೆ
ಸ್ವರ್ಗದಲ್ಲೇ ತೇಲಾಡುತ್ತಾರೆ
ಕಂಡವರ ಎದೆಗುಂಡಿಗೆ ಬಡಿತ ಹೆಚ್ಚಿಸಿ.

ನಮ್ಮೂರ ಕರಿ ಹುಡುಗರು
ಬಿಳಿದೊಗಲ ಕಂಡು ಜೊಲ್ಲು ಸುರಿಸಿ
ಜಾರಿ ಬಿದ್ದು ಬೋಲ್ಡಾಗಿ ಬಿಡುತ್ತಾರೆ.

ಅಂದವೇ ಬಂಡವಾಳ ಇವರಿಗೆ
ತಲೆಯೊಳಗೆ ಜೇಡಿ ಮಣ್ಣು
ಹೃದಯವಂತಿಕೆ ಇಲ್ಲದವರು

ಹೈದರ ಕಂಡು ಮುಲಕಾಡುತ್ತಾರೆ
ಮೂಗು ಮುರಿಯುತ್ತಾರೆ
ದೂಷಿಸಿ ದೂರ ನೂಕುತ್ತಾರೆ.

ಬಿಳಿ ಹುಡುಗಿ ದಂಬಾಲು ಬಿದ್ದು
ಸಾಲಿ ಬಿಟ್ಟ ಸಂಕ್ರು
ಕರಿಯ ಖಧೀಮ

೬೦. ನನ್ನೊಳಗಿನ ಅವಳ ಪದ್ಯ

ಒಂದಿನ ನನ್ನವಳು ಜಗಳ ತಗೊಂಡೇ ಬಂದ್ಲು
ಅಲ್ರೀ ನೀವು ಎಲ್ಲಾರ ಮ್ಯಾಲ ಪದ್ಯ ಬರೀತಿರಿ
ಮತ್ತ ನನ್ನ ಮ್ಯಾಲ ಯಾಕ ಬರಿಯಂಗಿಲ್ಲಾಂತ
ಹಲ್ಲಗಿಂಜುತ್ತಾ ಕಾಲಬೆಳ್ಳಿಂದ ನೆಲದಾಗ ಗೆರಿ ತೆಗಿಯತೊಡಗಿದ್ಲು.

ಗುಟ್ಟು ರಟ್ಟಾತಲೇ ಅಂದವನೇ,
ತಡವರಿಸುತ್ತಲೇ,
ಎ... ಎ... ನಾ ಯಾರಮ್ಯಾಲ ಬರದೀನಿ ಮರಾಯ್ತಿ ಅಂದೆ
ನಂಗೆ ಗೊತ್ತಾಗೈತಿ ನಿಮ್ದೆಲ್ಲಾ
ಹಳ್ಳೆಣ್ಣೆ ಕುಡಿದೋರಗತಿ ಮಕಮಾಡಿ ಕುಂತೆ,

ಪಕ್ಕದ ಮನಿಯಾಕಿ ನಿಮ್ಮನ್ನ ನೋಡಿ ಹಲ್ಲಕಿರದ್ಲು ಅಂತ
ಆಕಿ ಹಲ್ಲಿನ ಮ್ಯಾಲ ಬರದದ್ದು,
ಹಿಂದಿನ ಮನಿಯಾಕೆ ನಿಮ್ಮನ್ನೋಡಿ ಕಣ್ಣು ಮಿಟಿಕಿಸಿದ್ಕ
ಕಣ್ಣಿನ ಮ್ಯಾಲ ಬರದದ್ದು

ಬೆಂಗಳೂರಿಗಂತ ಹೋದಾಗ ಕಬ್ಬನ ಪಾರ್ಕಿನ್ಯಾಗ ಕಂಡೊಳ ಮ್ಯಾಲ
ಹಾಸನಕ್ಕಿಂತ ಹೋಗಿ ಬಂದದ್ದು
ಒಂದಾ, ಎಲ್ಡ, ನಿಮ್ಮ ಪದ್ಯಾನೆಲ್ಲಾ ಓದೀನಿ....
ಬೆವರು ಕಿತ್ತು ಅಂಗಿ ಒದ್ದೆಯಾಗಿತ್ತು, ಫ್ಯಾನ್ ಅಂತ ಕಿರಲಿದೆ,
ಕೃಷ್ಣ ನೆಪ್ಪಾದ ಏನ ಬಾನಗೇಡಿ ಮಾಡಿದ್ರು ದೇವರಾದಿ
ಚಂದನೋಡಿ ಬರಿಯಾಕ ಹೋದ್ರ ಮೈಮಾಲ ಬರಾಕ ಹತ್ತು
ನನ್ನೊಳಗೆ ಮಾತಾಡ್ತಿದ್ದೆ
ನೀವು ಏನಾರ ಬರಲಿಲ್ಲಾಂದ್ರ ನೋಡ್ರಿ ಅಂತ ಗುಟರ್ ಹಾಕಿದ್ಲು

ಅಯ್ಯೋ ನಿಲ್ಲು... ಬರೀತೀನಿ ಅಂತ ಯೋಚ್ನೆ ಮಾಡ್ದೆ,
ಅಲ್ಲಾ ನಿನ್ನ ಯಾವ ಅಂಗದ ಮ್ಯಾಲ ಬರೀಲಿ ಹೇಳು,
ಎಲ್ಲಾ ನೋಡಿದ್ರ ಮಂಗ್ಯಾನಂಗ ಅದಾವು...
ಏನಂದ್ರಿ, ಚೀರಾಡಿದಳು...

ಅಲ್ಲಾ ಎಲ್ಲಾನೂ ಒಂದಕ್ಕಿಂತ ಒಂದು ಚಂದ ಅದಾವು ಅಂದೆ.
ಹಂಗಾರ ಹಿಂಗ ಮಾಡ್ರಿ, ಮಕದ ಮ್ಯಾಲೊಂದು

ಮೂಗಿನಮ್ಯಾಲ, ಕಣ್ಣಿನಮ್ಯಾಲ ಅಂತ
ದಿನನಿತ್ಯದ ದಿನಸಿನ ಲೀಸ್ಟ್ ಹಂಗ
ಉದ್ದನೆ ಪಟ್ಟಿ ಕೊಟ್ಟಳು.
ಕವನ ಬರಿಲೋ ಪಟ್ಟಿ ಓದಿ ಪ್ಯಾಟೀಗ ಹೋಗಲಿ,
ರಾಗ ಎಳದೆ
ಹೂ... ನಾ ಹ್ಯಾಂಗ ಚೆಂದ ಕಂಡೇನು ನಿಮಗ.

ಮೂಲಿಮನಿ ಮಾಲತಿ, ಬೆಂಗಳೂರು ಭಾರತಿ
ಹಾಸನದ ಆರತಿ ಹೂಂ...
ಗಂಟಮಾರಿ ಹಾಕ್ಕೊಂಡು ಹೊಂಟೆಬಿಟ್ಟಳು
ಪಾಪ, ಜೀವನಾದಾಗ ಜೀವ ಹಿಂಡೋ
ಅಲ್ಲಾ ಜೀವ ಕೊಡೊ ಜೀವಿ ಅಲ್ಲಾ
ಎಂದು ಪೆನ್ನ ಹಿಡಿದು ಘನಘೋರ ವಿಚಾರ ಮಾಡ್ತಾ ಕುಂತೆ.

ಅಪ್ಪಾ ಎನ್ನುತ ಚೀರಾಡುತ್ತಲೇ ಬಂದರು
ಅವಳ ಇಬ್ಬರು ಮುದ್ದಿನ ಮಕ್ಕಳು
ಎ, ಅವರು ಪದ್ಯ ಬರಿಯಾಕ ಕುಂತಾರ
ಶಿವನ ತಡೆದ ಗಣಪತಿಯಂತೆ ತಡೆದಳು
ನಾವು ಹೋಗಲೇಬೇಕು ಅಮ್ಮ ರಾಗ ಎಳೆದರು
ಬ್ಯಾಡ ಅಂದಳವಳು
ವಾದ ವಿವಾದಗಳ ನಡುವೆ out ಆಯಿತು Mood.
ಬನ್ನಿ ಎಂದು ಪೆನ್ನು ಬಿಸಾಕಿದೆ
ನಿಮಗೆ ಅವರೇ ಹೆಚ್ಚು,
ನಾ ಅಂದ್ರ ಕಾಸಿನ ಕಿಮ್ಮತ್ತಿಲ್ಲ ಈ ಮನೆಯೊಳಗ
ಮೂತಿ ತಿರುವಿ ಹೊಂಟೆಬಿಟ್ಟಳು.
ನನ್ನವಳ ಪದ್ಯ..
ನನ್ನ ಎದೆಯೊಳಗೆ ಉಳಿಯಿತು
ಹೊರಹಾಕಲು ಹವಣಿಸುತ್ತಿದ್ದೇನೆ,
ಹವಣಿಸುತ್ತಲೇ ಇದ್ದೇನೆ....



ನಿರಂತರ ಅಭದ್ರತೆಯ ನಡುವಣ ಬಡತನದ ಮಡಿಲಿನಿಂದ ಬಂದು ಸಾಹಿತ್ಯದ ವಿಶಾಲ ಅಂಗಣವನ್ನು ತಲುಪಿರುವ ಮಿತ್ರರಾದ ಶಿರಗಾನಹಳ್ಳಿ ಶಾಂತನಾಯ್ಕರು ಮೈಸೂರು ವಿಶ್ವವಿದ್ಯಾಲಯದ ಸುಪ್ರಸಿದ್ಧ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದಾರೆ. ತಮ್ಮ ಬರವಣಿಗೆಯ ಹಸಿವನ್ನು ದಿನದಿನಕ್ಕೂ ಇವರು ವೃದ್ಧಿಸಿಕೊಳ್ಳುತ್ತಿರುವುದು ಸಂತೋಷದ ಸಂಗತಿಯಾಗಿದೆ. ನಮ್ಮ ಅಲೆಮಾರಿ ಬಂಜಾರ ಜನಾಂಗದ ಹೇರಳ ಅನುಭವವನ್ನು ಹೊಂದಿರುವ ಇವರು ತಮ್ಮೆಲ್ಲ ಕತೆ, ಕವಿತೆ, ನಾಟಕ, ಕಾದಂಬರಿ ಹಾಗೂ ಲೇಖನಗಳ ರಚನೆಯಲ್ಲಿ ತೋರುತ್ತಿರುವ ಶ್ರದ್ಧೆಯು ವಿಶಿಷ್ಟವಾದುದು. ಹೊಸಕನಸುಗಳ ಸಮೃದ್ಧ ಬದುಕಿಗೆ ಹಾತೊರೆಯುವ ನಾವೆಲ್ಲ ಮತ್ತು ನಮ್ಮ ಸುತ್ತಲಿನ ಅಸಾಧಾರಣ ಬೇದಭಾವ, ಕ್ರೌರ್ಯ, ಅಸಮಾನತೆ ಹಾಗೂ ಕುಬ್ಜತೆಯ ಕಂದಕಗಳನ್ನು ನಿವಾರಿಸುತ್ತಲೆ ಸಾಮೂಹಿಕ ಹೊಣೆಗಾರಿಕೆಯ ಕರ್ತವ್ಯವನ್ನು ಚೆನ್ನಾಗಿ ಅರಿತಿರುವ ಶಾಂತನಾಯ್ಕರು ತಮ್ಮ ಬರವಣಿಗೆಯು ಸೂಕ್ಷ್ಮ ಹಾಗೂ ಪರಿಣಾಮಕಾರಿಯಾಗಿ ರೂಪಗೊಳ್ಳುವಂತೆ ಪ್ರಯತ್ನಿಸುತ್ತಿದ್ದಾರೆ. ಇಂತಹ ಜನಪರ ಪ್ರಯತ್ನದ ಹಾದಿಯಲ್ಲಿ ಈ ಸೂಚನೆಗಳನ್ನು ಶಾಂತನಾಯ್ಕರ "ಹಳೆಭಾವನೆಯ ಹೊಸಮನುಷ್ಯ" ಕವನ ಸಂಕಲನದಲ್ಲಿ ಕಾಣಲು ಸಾಧ್ಯವಾಗುತ್ತಿದೆ. ಈ ಬದುಕಿನ ಹಳೆಯ ಕೊಳೆಯ ಅಸಹ್ಯಕರ ರಾಶಿಯ ಅನಾಹುತದ ವಿವರಗಳು ಮನವರಿಕೆಯಾಗುತ್ತಿದ್ದಂತೆಯೇ ನಾವೆಲ್ಲ ಸಹಜವಾಗಿ ಹೊಸಸ್ನೇಹಸಂಬಂಧಗಳ ಸುಗಂಧದ ಲೋಕದಂಚಿಗೆ ತೆವಳಲು ಸಿದ್ಧರಾಗುತ್ತೇವೆ. ಇಂತಹ ಅರ್ಥಪೂರ್ಣ ಸಿದ್ಧತೆಯೆಡೆಗೆ ತುಡಿಯುವ ಚೈತನ್ಯವುಳ್ಳ ಈ ಗೆಳೆಯರು ತಮ್ಮ ಗುರಿಯೆಡೆಗೆ ನಿತ್ಯಸಾಗುತ್ತಲೇ ಇನ್ನಷ್ಟು ಮಹತ್ವಪೂರಕ ಕೃತಿಗಳನ್ನು ರಚಿಸಲೆಂದು ನಾನು ಹೃದಯ ತುಂಬಿ ಹಾರೈಸುತ್ತೇನೆ.

ಪ್ರೊ. ಕಾಳೇಗೌಡ ನಾಗವಾರ.